# ಸ್ವಾತಂತ್ರ್ಯ ಪೂರ್ವದ ಕರ್ನಾಟಕದಲ್ಲಿ ವಿಮಾ ವ್ಯವಹಾರ

ಪಿ. ಎನ್. ಮೂರ್ತಿ
ನ್ಯಾಷನಲ್ ಸ್ಕೂಲ್ ಆಫ್ ಇನ್ಶೂರೆನ್ಸ್ ಎಜುಕೇಶನ್
ಅಂಡ್ ರಿಸರ್ಚ್,
178/l. ನಿರ್ಮಲ ಆರ್ಕೇಡ್ .ಆರ್. ಟಿ. ನಗರ
ಬೆಂಗಳೂರು–560032

Insure World Vol-1 Iss-1 Qtly Jan 2024 pp.37-53

ಇತ್ತೀಚೆಗೆ ಬೆಂಗಳೂರಿನ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನದ ಗ್ರಂಥಾಲಯದಲ್ಲಿ "ಜಯ ಕರ್ನಾಟಕ"ದ ಪುರಾತನ ಸಂಚಿಕೆಗಳ ಪುಟಗಳನ್ನು ತಿರುವಿಹಾಕುತ್ತಿದ್ದಾಗ ಮಿಂಚು ಬಡಿದಂತಾದದ್ದು ಕೆಲವು ಜಾಹಿರಾತುಗಳು ಕಣ್ಣಿಗೆ ಬಿದ್ದಾಗ. ಆದ ಆನಂದ ಅಷ್ಟಿಷ್ಟಲ್ಲ. ಕಾರಣವಿಷ್ಟೆ. ಸಂಚಿಕೆಗಳು 1930–50ರ ನಡುವಿನ ಕಾಲದವು. ಅಂದಿನ ಮೈಸೂರ ಹೊರಗಿನ ಪ್ರಾಂತ್ಯದಲ್ಲಿ ಪ್ರಕಟವಾದವು. ಜಾಹಿರಾತಿನ ವಸ್ತು ವಿಮೆ. ಅವುಗಳಲ್ಲಿ ಕೆಲವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಹೆಚ್ಚಿನ ವಿವರಗಳನ್ನು ಸಮಕಾಲೀನ ಆರ್ಥಿಕ ವರದಿಗಳಿಂದ ಸಂಗ್ರಹಿಸಲಾಗಿದೆ.


ಸಂಕ್ಷಿಪ್ತವಾಗಿ ಹೇಳಬಹುದಾದ ಪೀಠಿಕೆಯೆಂದರೆ ಬ್ರಿಟಿಷ್ ಆಡಳಿತಕ್ಕೆ ಒಳಪಟ್ಟಿದ್ದ ಭಾರತದಲ್ಲಿನ ವಿಮಾ ಇತಿಹಾಸ ಸುಮಾರು 175 ವರ್ಷಗಳಿಗೂ ಮೀರಿದುದು. ದೇಶದ ಅಭ್ಯುನ್ನತಿಯನ್ನು ಬಯಸುತ್ತಿದ್ದ ಉದ್ಯಮಿಗಳು ಅತಿ ಲಾಭಕರವಾದ ಈ ವಿಮಾ ವ್ಯವಹಾರದಲ್ಲಿ ತೊಡಗಿದುದು ಸಹಜ. ಈ ಕಾಲಾಂತರದಲ್ಲಿ ಬಹಳಷ್ಟು ಕಂಪನಿಗಳು ತೇಲಿ ಮುಳುಗಿದವು.

ಸ್ವತಂತ್ರ ಭಾರತದಲ್ಲಿ ವಿಮಾ ಉದ್ಯಮವು 1956ರಲ್ಲಿ ರಾಷ್ಟ್ರೀಕೃತಗೊಂಡಾಗ ಸುಮಾರು 245ಕ್ಕೂ ಮೀರಿದ ಸಂಖ್ಯೆಯಲ್ಲಿನ ಕಂಪನಿಗಳು ಭಾರತೀಯ ಜೀವ ವಿಮಾ ನಿಗಮವಾಗಿಯೂ, 1972ರಲ್ಲಿ ಮಿಕ್ಕ ಸಾಮಾನ್ಯ ವಿಮಾ ಸಂಸ್ಥೆಗಳು ರಾಷ್ಟ್ರೀಕೃತ ಕಂಪನಿಗಳಾಗಿಯೂ ಬದಲಾದದ್ದು ಇತಿಹಾಸ.

1930–50ರ ನಡುವಣ ಸಮಯದಲ್ಲಿನ ವಿಮಾ ಕಂಪನಿಗಳ ಬಗೆಗಿನ ವಿವರಗಳು ಈಗ ದುರ್ಲಭ. ದೊರೆತಿರುವ ಮಾಹಿತಿಗಳನ್ನು ಇಲ್ಲಿ ಕಲೆಹಾಕಲಾಗಿದೆ.

ಈ ಜಾಹಿರಾತಿನ ತುಣುಕುಗಳಲ್ಲಿ ಅತಿ ಆಶ್ಚರ್ಯಕರ ಅಂಶಗಳು ಅಡಗಿವೆ, ಇಂದಿನ ಲಾಭಪ್ರೇರಿತ ಉದ್ಯಮದಲ್ಲಿ ಮರೆತು ಹೋಗಿರುವ, ಆದರೆ ಸಮಾಜಕ್ಕೆ ಮತ್ತು ರಾಷ್ಟ್ರೋನ್ನತಿಗೆ ಅತ್ಯವಶ್ಯಕವಾದ ಕೆಲ ಅಂಶಗಳು ಹೊರಬೀಳುತ್ತವೆ. ಇದು ಮುಂದಿನ ದಿನಗಳಿಗೆ ದಾರಿದೀಪವಾಗಬಹುದಾಗಿದೆ.

**1**. **ಏಶಿಯಾಟಿಕ್ ವಿಮಾ ಕಂಪನಿ, ಮಾರ್ಕೆಟ್ ರೋಡ್, ಧಾರವಾಡ**.





ಈ ಚಿತ್ರದಲ್ಲಿ ಮೂರು ಹೇಳಿಕೆಗಳು ಅಡಗಿವೆ.
"ಕರ್ನಾಟಕದ ಕೀರ್ತಿ–ಸುರಕ್ಷಿತ ಮತ್ತು ಸರಳ ವ್ಯವಹಾರಕ್ಕೆ ಪ್ರಸಿದ್ಧರಾಗಿರುವ ಅಖಿಲ ಕರ್ನಾಟಕದ ಹಿರಿಯ ಮತ್ತು ಅತ್ಯಂತ ದೊಡ್ಡ ವಿಮಾ ಸಂಸ್ಥೆ ಅಂದರೆ– ಎಶಿಯಾಟಿಕ್ ಕನ್ನಡಿಗರ ಹೆಮ್ಮೆ – ಹಿಂದೂಸ್ಥಾನದ ವಿಮಾ ಉದ್ಯಮದಲ್ಲಿ ಕರ್ನಾಟಕಕ್ಕೆ ಒಂದು ಗೌರವ ಸ್ಥಾನವನ್ನು ಸಂಪಾದಿಸಿರುವ ಸಂಸ್ಥೆ ಅಂದರೆ– ಏಶಿಯಾಟಿಕ್!!

ಏಶಿಯಾಟಿಕ್!– ಪ್ರಥಮ ಶ್ರೇಣಿಯ ಕಂಪನಿಗಳಲ್ಲಿ ಒಂದಾದ ಸಂಸ್ಥೆ"
ಜೊತೆಗೆ "ಬೇಕಾಗಿದ್ದಾರೆ– ಸ್ಪೆಷಲ್ ಏಜೆಂಟರು, ಆರ್ಗನೈಜರು ಮತ್ತು ಚೀಫ್ ಏಜೆಂಟರಾಗಿ ಕೆಲಸ ನಡೆಯಿಸಲು ಉತ್ಸಾಹಿ ಯೋಗ್ಯ ಜನರು ಬೇಕಾಗಿದ್ದಾರೆ" ಎಂಬ ನೌಕರಿಯ ವಿವರವೂ ಸೇರಿದೆ.

ಗಮನಿಸಬೇಕಾದ ಅಂಶಗಳೆಂದರೆ "ಕರ್ನಾಟಕ", "ಅಖಿಲ ಕರ್ನಾಟಕ", ಕನ್ನಡಿಗರು ಎಂಬ ಪದಗಳ ಬಳಕೆಯ ಮೂಲಕ ಜಯಕರ್ನಾಟಕದ ಕೇಂದ್ರವಾದ ಇಂದಿನ ಉತ್ತರ ಕರ್ನಾಟಕದಲ್ಲಿ 1930ರ ಸುಮಾರಿನಲ್ಲಿ ಅಂದರೆ ಏಕೀಕೃತ ನವ "ಕರ್ನಾಟಕ"ದ ಜನನಕ್ಕೆ ಬಹು ಮುನ್ನವೇ ಕನ್ನಡಿಗರಲ್ಲಿದ್ದ ಕನ್ನಡ ಜಾಗ್ರತಿಯನ್ನು ಈ ಹೇಳಿಕೆಗಳು ಬಿಂಬಿಸುತ್ತವೆಂಬುದು ನಮಗೆಲ್ಲ ನಿಜಕ್ಕೂ ಹೆಮ್ಮೆಯ ವಿಷಯವಾಗಿದೆ.

**2. ದಿ ಟ್ರಾಪಿಕಲ್ ಇನ್ಶ್ಯೂರೆನ್ಸ್ ಕಂಪನಿ ಲಿಮಿಟೆಡ್, ಮುಖ್ಯ ಕಛೇರಿ: ಹೊಸ ದಿಲ್ಲಿ**.




"ಈ ಪ್ರಮುಖ ರಾಷ್ಟ್ರೀಯ ಸಂಸ್ಥೆಯು ದೇಶದ ಪ್ರಮುಖ ದೇಶ


ಭಕ್ತರಿಂದ ಸ್ಥಾಪಿಸಲ್ಪಟ್ಟಿದೆ." ಎಂಬ ಹೇಳಿಕೆಯನ್ನು ಹೊತ್ತ ಈ ಸಂಸ್ಥೆಯು ಸ್ಥಾಪನೆಯಾದದ್ದು 1927ರಲ್ಲಿ. ನೋಂ. ಕಛೇರಿಯು "ಟ್ರಾಫಿಕಲ್ ಬಿಲ್ಡಿಂಗ್ಸ್, ಕನಾಟ್ ಸರ್ಕಸ್, ಹೊಸ ದೆಹಲಿ.
ಇಲ್ಲಿರುವ ಕೆಲವು ಸಂಸ್ಥಾಪಕ ಡೈರೆಕ್ಟರರುಗಳ ಹೆಸರುಗಳು ಸ್ಮರಣಾರ್ಹ. ಅವರಲ್ಲಿ ಪಂಡಿತ್.ಮೋತಿಲಾಲ್ ನೆಹರು, ಹಕೀಮ ಅಜಮಲಖಾನ್, ಎಸ್.ಶ್ರೀನಿವಾಸ ಅಯ್ಯಂಗಾರ್. ಡಾ.ಎಂ.ಎ.ಅನ್ಸಾರಿ ಸೇರಿದ್ದಾರೆ.
ಈ ಸಂಸ್ಥೆಯ ವ್ಯವಹಾರವು ಜೀವ ವಿಮೆ, ಬೆಂಕಿಯ ವಿಮೆ, ಸಮುದ್ರದ ಹಾಗೂ ಬೇರೆ ಅಪಘಾತಗಳ ವಿಮೆ ಗಳನ್ನೊಳಗೊಂಡಿರುವುದು, 1932 ರ ಈ ಜಾಹಿರಾತಿನಲ್ಲಿ ತಿಳಿಸಿರುವಂತೆ
"1.ಪೂರ್ತಿಯಾದ ವಿಮಾವ್ಯವಹಾರವು ರೂ.340 ಲಕ್ಷಕ್ಕಿಂತ ಹೆಚ್ಚಾಗಿದೆ.
2.ಸಲ್ಲಿಸಿದ ಹಕ್ಕಿನ(ಕ್ಲೇಮು) ಹಣವು 3.5 ಲಕ್ಷಕ್ಕಿಂತ ಹೆಚ್ಚಾಗಿದೆ.
3.ಪ್ರಾರಂಭದಿಂದ ವಿಮಾದಾರರಿಗೆ ಲಾಭವನ್ನು (ಬೋನಸ್ಸು) ಹಂಚುತ್ತಿದೆ" ಎಂಬ ಮಾಹಿತಿ ದೊರೆಯುತ್ತದೆ."

"ಯೋಗ್ಯ ಏಜಂಟರಿಗೂ ಆರ್ಗನೈಜರಿಗೂ ಯಶಸ್ಸಿನ ಶಿಖರವನ್ನು ಮುಟ್ಟಲು ಒಳ್ಳೇ ಸಂದರ್ಭವನ್ನು ಒದಗಿಸಿಕೊಟ್ಟು ಯಾವಾಗಲೂ ಅವರನ್ನು ಸೌಜನ್ಯದಿಂದಲೂ,ಯೋಗ್ಯ ರೀತಿಯಿಂದಲೂ ನಡಿಸಿಕೊಳ್ಳುತ್ತಿದೆ. ನಮ್ಮ ವಿಸ್ತೃತ ಯೋಜನೆಯಲ್ಲಿ ಮನಸೆಳೆಯುವ ಸಂಬಳದ ಮೇಲೆ ಆರ್ಗನೈಜರನ್ನು ನಿಯಮಿಸಿಕೊಳ್ಳತಕ್ಕದ್ದಿದೆ." ಎಂಬ ಹೇಳಿಕೆಯೂ ಇದರಲ್ಲಿದೆ.

ಇಂತಹ ಸಂಸ್ಥೆಯೂ ಸಹ, ಅವ್ಯವಸ್ಥೆಯ ಆಡಳಿತಕ್ಕೆ ಸಿಲುಕಿ,ವಿಮಾ ಉದ್ಯಮದ 1952ರ ವಾರ್ಷಿಕ ವರದಿಯಲ್ಲಿ ತಿಳಿಸಿರುವಂತೆ ವಿಮಾ ಕಾಯ್ದೆಯ ಕಲಂ 52(ಅ) ರ ಅನುಸಾರ ಆಡಳಿತಗಾರರನ್ನು ನೇಮಿಸಲಾಗಿತ್ತು.


**3. ದಿ ಬಾಂಬೆ ಲೈಫ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್**
ಬಹಳಷ್ಟು ಜಾಹಿರಾತುಗಳನ್ನು ನೀಡಿರುವ ಈ ಸಂಸ್ಥೆಯು ಕನ್ನಡನಾಡಿನಲ್ಲಿ ಬಹಳ ಪ್ರಬಲವಾಗಿದ್ದಂತೆ ತೋರುತ್ತದೆ.

ದಿ ಬಾಂಬೆ ಲೈಫ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್ ಸಂಸ್ಥೆಯು 1908 ರಲ್ಲಿ ಬಾಂಬೆಯಲ್ಲಿ ಸ್ಥಾಪಿತಗೊಂಡಿತು.





"ಚಿಂತೆಯೇಕೆ?

'ಬಾಂಬೆ ಲೈಫ್' ಪಾಲಿಸಿಗಳು. ವಿಮಾನ ದಾಳಿಗಳೇ ಮೊದಲಾದ ಶತ್ರುಗಳ ಕಾರ್ಯ ಕಲಾಪಗಳಿಂದ ಸೈನ್ಯಕ್ಕೆ ಸಂಬಂಧಪಡದ ನಾಗರಿಕರಿಗೆ ಸಂಭವಿಸುವ ಮೃತ್ಯುಗಳಿಂದ ಉಂಟಾಗುವ ವಿಮೆಯ ಹೊಣೆಯನ್ನು ಹೊರುತ್ತದೆ. ಎ.ಆರ್.ಪಿ ಕೆಲಸಗಾರಿಗೂ ಇದು ಅನ್ವಯಿಸುತ್ತದೆ. ಆದ್ದರಿಂದ ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್ ಸಂಸ್ಥೆಯಲ್ಲಿ ಕೂಡಲೆ ವಿಮೆಯಿಳಿಸಿ ನಿಮ್ಮ ಹಿತಬಂಧುಗಳ ಬಗ್ಗೆ ನೀವು ಜರುಗಿಸಬೇಕಾದ ಕರ್ತವ್ಯವನ್ನು ಮಾಡಿರಿ" ಇದರಲ್ಲಿ ಜನಸಾಮಾನ್ಯರಿಗೆ ಯುದ್ಧ ಸಮಯದಲ್ಲಿ ರಕ್ಷಣೆಯನ್ನು ಒದಗಿಸಿದ ವಿಷಯ ವಿಷಯ ತಿಳಿದುಬರುತ್ತದೆ. ಮೊದಲ ವಿಶ್ವ ಸಮರದ ಸಮಯ. ಎ.ಆರ್.ಪಿ(ಏರ್ ರೇಡ್ ಪ್ರಿಕಾಶನ್) ಕೆಲಸಗಾರರ ಜವಾಬ್ದಾರಿ ಮುಖ್ಯ ರೀತಿಯದ್ದು. ಇವರಿಗೂ ವಿಮೆಯ ರಕ್ಷೆ ಒದಗಿಸಿರುವುದು ಗಮನಾರ್ಹ.





"CONFIDENCE:is a great asset in building Business. THE BOMBAY LIFE ASSURANCE has created Public Confidence by its *Fair Dealings *Prompt Settlement of Claims,*Liberal Terms, *Long Experience,*Sound Investments To insure or to represent, it pays you to consult:Messrs. Kochikar Brothers Ltd,Chief Agents for South India Including Indian States. Udipi Mangalore Calicut Madras Bangalore-City Bombay"





ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪನಿ ಲಿಮಿಟೆಡ್ (1908 ರಲ್ಲಿ ಸ್ಥಾಪಿತವಾದದ್ದು) ಪೊಲಿಸಿದಾರರಿಗೆ ವಿಶೇಷ ರಿಯಾಯಿತಿ


ವರ್ಷಾವಧಿಯ ಪ್ರೀಮಿಯಮ್ಮುಗಳನ್ನು ತೆರುವ ಎಲ್ಲ ಪೊಲಿಸಿದಾರರಿಗೂ 'ಸಿಲ್ವರ್ ಜೂಬಿಲಿ"ಯ ರಿಯಾಯಿತಿಗಾಗಿ ಅವರವರ ಮುಂದಿನ ಪ್ರತಿವಾರ್ಷಿಕ ಪ್ರೀಮಿಯಮ್ಮಿನಲ್ಲಿ ಶೇಕಡಾ 2 1/2 ಸಲೆಯಷ್ಟು ಕಡಿಮೆಯಾದ ಮೊಬಲಗನ್ನು ತೆರುವ ರಿಯಾಯಿತಿ ಕೊಡಲಾಗಿದೆ. ಈ ರಿಯಾಯಿತಿಯ ಪ್ರಯೋಜನವನ್ನು ಆಗಲೇ ನೂರಾರು ಮಂದಿ ಪೊಲಿಸಿದಾರರು ಪಡಕೊಂಡಿದ್ದಾರೆ. ವರ್ಷಕ್ಕೊಮ್ಮೆ ಪ್ರೀಮಿಯಮ್ಮಿನ ಕಂತನ್ನು ಕಟ್ಟಲಪೇಕ್ಷಿಸುವವರು ತಮ್ಮ ಪೊಲಿಸಿಯ ನಂಬರುಗಳನ್ನು ನಮೂದಿಸಿ ನಮಗೆ ಅಥವಾ ನಮಗೆ ಸಂಬಂಧಪಟ್ಟ ನಮ್ಮ ಆಫೀಸುಗಳಿಗೆ ತಿಳಿಸಬೇಕಾಗಿ ಈ ಮೂಲಕ ವಿನಂತಿ ಮಾಡಲಾಗುತ್ತದೆ.
ಕೊಚ್ಚಿಕಾರ್ ಬ್ರದರ್ಸ, ಮದರಾಸ್ ಬ್ರಾಂಚ್ ಸೆಕ್ರೆಟರಿಗಳು, ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ.
ವಿ.ಸೂ. ಪ್ರಾತಿನಿಧ್ಯವಿಲ್ಲದ ಜಿಲ್ಲೆಗಳಿಂದ ಉತ್ಸಾಹಶಾಲಿ ಗೃಹಸ್ಥರುಗಳ ಏಜೆನ್ಸಿ ಅರ್ಜಿಗಳು ಅಂಗೀಕರಿಸಲಾಗುವುವು.
ಶಾಖೆಗಳು :– (1)ಪೋಸ್ಟ ಬಾಕ್ಸ್ ನಂ:337, ಮೌಂಟ್ ರೋಡ್, ಮದರಾಸು (2)ಕೊರ್ಪೊರೇಷನ್ ಬಿಲ್ಡಿಂಗ್ಸ್, ಕಾರ್ ಸ್ಟ್ರೀಟ್, ಮಂಗಳೂರು, (3)ಹಜೂರ್ ರೋಡ್, ಕಲ್ಲಿಕೋಟೆ(ಮಲಬಾರು). (4)ಉಡಿಪಿ (5) ಇಸ್ಮಾಯಿಲ್ ಬಿಲ್ಡಿಂಗ್, ಲೋಹಾರ್ ಚಾಳ್, ಮುಂಬಯಿ–2"

ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಆರಂಭಗೊಂಡ ಈ ವಾರ್ಷಿಕ ಪ್ರೀಮಿಯಂನಲ್ಲಿನ ರಿಯಾಯಿತಿಯು(ಶೇ.2.5%) 1956 ರವರೆಗೆ ಮುಂದುವರೆದದ್ದನ್ನು ನಾವು ಕಾಣಬಹುದಾಗಿದೆ.




The Bombay Life Assurance Co,Ltd
Figures for 1939
completed Business exeecs Rs.1.42 crores
Total Funds exceed Rs.1.52 crores
Premium income during the year exceeds Rs. 37.5 lakhs
Claims paid during the year exceed Rs10 lakh
-----------------
These Insurance Policies form the Best investment in War Time.This is the unique opportunity to Agents to put through larger business.
To Insure or to Represent, Please apply to any of our following offices:..."
ಇದರಲ್ಲಿ ವರ್ಷ 1939ರ ವಹಿವಾಟಿನ ವಿವರಗಳ ಜೊತೆಗೆ "ವಿಮಾ ಪಾಲಿಸಿಗಳು ಯುದ್ಧಸಮಯದಲ್ಲಿನ ಉತ್ತಮ ವಿನಿಯೋಜನೆ(ಹೂಡಿಕೆ)" ಎಂಬ ಸಂದೇಶವನ್ನು ತಲುಪಿಸುತ್ತವೆ.





ಈ ಮೇಲಿನ ಎರಡೂ ಜಾಹಿರಾತುಗಳಲ್ಲಿನ ಸಾಮಾನ್ಯ ವಿವರಗಳು ಕೆಳಗಿನಂತಿವೆ:
"EVIDENCE OF SECURITY & STABILITY
It pays you to represent
The Bombay Life Assurance Co Ltd, Estd 1910

Figures that speak for themselves
Assets Rs.80,66,600
Total Assets over Rs.80,00,000
Life Fund over Rs.68,00,000
Premium Income over Rs.22,54,000
Interest Income Rs.3,16,000
Claims Paid Rs.5,75,000
Total Business In Force 4,42,51,200
Total Claims Paid Over R.38,50,000
Total Business In Force over Rs.4,42,51,000"
BRANCHES AT:PB 337, Mount Road, Madras; Visveshwarapuram, Bangalore city; Soumyalayam Puthiyara Calicut; Car Street Mangalore Udipi;

Charni Road, Bombay 4....."

ಈ ಮೇಲಿನ ಎರಡೂ ಜಾಹಿರಾತುಗಳಲ್ಲಿನ ಸಾಮಾನ್ಯ ವಿವರಗಳು ಕೆಳಗಿನಂತಿದ್ದು, ವಿಶೇಷತೆಯೆಂದರೆ ವಿಮಾ ವ್ಯವಹಾರದ ಕೆಲವು ಸೂಕ್ಷ್ಮ ವಿವರಗಳನ್ನು ನೀಡುತ್ತದೆ.

ಸ್ಥಿರತೆ ಮತ್ತು ಭದ್ರತೆಗೆ ಸಾಕ್ಷಿ
"ದ ಬಾಂಬೆ ಲೈಫ್ ಇನ್ಶೂರೆನ್ಸ್ ಕಂಪನಿ ನಿಯಮಿತ, 1910"–
ಇವರನ್ನು ಪ್ರತಿನಿಧಿಸುವುದರಿಂದ ಲಾಭವಿದೆ
ಒಟ್ಟು ಆಸ್ತಿ ರೂ. 80,66,600
ಜೀವ ವಿಮಾ ನಿಧಿ (ಲೈಫ್ ಫಂಡ್) ರೂ. 68,00,000 ಗೂ ಮೀರಿದೆ.
ಪ್ರೀಮಿಯಂ ಆದಾಯ ರೂ.22,54,000 ಗೂ ಮೀರಿದೆ
ಬಡ್ಡಿಯ ಆದಾಯ ರೂ 3,16,000
ಪಾವತಿಸಿದ ದಾವೆಗಳು ರೂ: 5,75,000
ಚಾಲ್ತಿಯಲ್ಲಿರುವ ವಿಮಾ ವ್ಯವಹಾರ: ರೂ 4,42,51,200
ಇಲ್ಲಿಯವರೆವಿಗೂ ಪಾವತಿಸಿರುವ ದಾವೆಗಳ ಒಟ್ಟು ಮೊತ್ತ ರೂ:38,50,000




"YOUR AMBITION to build up a bright future in your retired life,
YOUR DESIRE to educate your children so that they may stand on their own legs,
YOUR ANXIETY to provide your dear wife and children with a minimum monthly allowance
YOUR MORAL LIABILITY to provide for the marriage of your daughters,

May all be only dream if you do not avail of modern scientific Life Insurance Schemes,which will satisfy your ambition,Desire,Anxiety and Moral Liability and make the whole thing a rality by small contribution out of your own Monthly Savings towards the payment in- Bombay Life Assurance Co, Ltd…"


ಈ ಜಾಹಿರಾತಿನಲ್ಲಿ ಮಾನವ ಜೀವನದ ಕನಸುಗಳಾದ ವೃದ್ಧಾಪ್ಯದಲ್ಲಿನ ಆರ್ಥಿಕ ಸ್ಥಿರತೆ, ಮಕ್ಕಳು ಸ್ವಾವಲಂಬಿಗಳಾಗಲು ಅವಶ್ಯಕವಾದ ಉತ್ತಮ ವಿದ್ಯಾಭ್ಯಾಸದ ಸೌಲಭ್ಯ, ಅವಘಡದ ಸಮಯದಲ್ಲಿ ಪತ್ನಿ ಮತ್ತು ಮಕ್ಕಳಿಗೆ ಕನಿಷ್ಟ ಮಾಸಾಶನ, ಸಾಮಾಜಿಕ ಮತ್ತು ನೈತಿಕ ಜವಾಬ್ದಾರಿಯಾದ ಹೆಣ್ಣು ಮಕ್ಕಳ ವಿವಾಹ ಇತ್ಯಾದಿಗಳನ್ನು ನೆನಸಾಗಿಸಲು, ಪ್ರತಿ ತಿಂಗಳೂ ತಮ್ಮ ಉಳಿತಾಯದಿಂದ ಬಾಂಬೆ ಜೀವ ವಿಮಾ ಸಂಸ್ಥೆಯ ಯೋಜನೆಗಳಲ್ಲಿ ತೊಡಗಿಸುವುದರ ಮೂಲಕ ಸಾಧ್ಯ ಎಂಬುದನ್ನು ತಿಳಿಸುತ್ತದೆ.




"ದಿ ಬಾಂಬೆ ಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್
(ಸ್ಥಾಪನೆ:1910)
ಮದ್ರಾಸ ಶಾಖಾ ಕಾರ್ಯದರ್ಶಿಗಳು:
ಕೊಚ್ಚಿಕರ ಬ್ರದರ್ಸ ಲಿಮಿಟೆಡ್,
(ಈ ಸಂಸ್ಥೆಯು ಕೊಚ್ಚೀಕರ ಬ್ರದರ್ಸರನ್ನು ಒಳಗೊಂಡಿದೆ)
ರಿಜಿಸ್ಟರ್ಡ ಕಛೇರಿ: ಉಡುಪಿ
ವಿಮಾಕ್ಷೇತ್ರದಲ್ಲಿಯ ಅತಿ ನೂತನ ಮತ್ತು ಅತ್ಯಾಧುನಿಕ ಸೌಕರ್ಯಗಳನ್ನೊದಗಿಸುವ ಆದರ್ಶ ಜೀವ ವಿಮಾ ಸಂಸ್ಥೆ.
ಪ್ರಗತಿಯೆ ಜನಪ್ರಿಯತೆಯ ಪ್ರತೀಕ
1937ರಲ್ಲಿಯ ಹೊಸ ಉದ್ಯಮ ರೂ.1,40,08,725
ಪ್ರೀಮಿಯಂ ಉತ್ಪನ್ನ ರೂ:30,00,000 ಕ್ಕಿಂತ ಹೆಚ್ಚು
ಒಟ್ಟು ಆಸ್ತಿ ರೂ 1,00,00,000 ಕ್ಕಿಂತ ಹೆಚ್ಚು
ಒಟ್ಟು ಕ್ಲೇಮುಗಳನ್ನು ಕೊಟ್ಟದ್ದು ರೂ.50,00,000 ಕ್ಕಿಂತ ಹೆಚ್ಚು
ಪ್ರಾಮಾಣಿಕರೂ ವರ್ಚಸ್ವಿಗಳೂ ಆದ ಸ್ತ್ರೀ ಪುರುಷರಿಂದ ಏಜೆನ್ಸಿಗಳಿಗಾಗಿ ಅರ್ಜಿಗಳನ್ನು ಅಪೇಕ್ಷಿಸುತ್ತೇವೆ. ಧಾರಾಳ ಪ್ರತಿಫಲ ದೊರೆಯುವುದು.
ಹೆಚ್ಚಿನ ವಿವರಗಳಿಗಾಗಿ ಬರೆಯಿರಿ.
Kochikar Brothers Ltd,
Bombay Life Building, Central Office, Udipi
ಕಚೇರಿಗಳು:
1.ರಥಬೀದಿ, ಮಂಗಳೂರು
2.ಪುತಿಯಾರಾ, ಕಾಲಿಕತ್ತ
3.ಪೋ.ಬಾ.337,ಮೌಂಟ್ ರೋಡ, ಮದ್ರಾಸ (ಫೋನ್ ನಂ.8245)
4.ವಿಶ್ವೇಶ್ವರಪುರಂ ಸರ್ಕಲ್, ಬೆಂಗಳೂರು ಸಿಟಿ (ಫೋನ್.ನಂ.2182)
5.ಗೌತಮನಿವಾಸ, ಚರ್ನಿರೋಡ, ಗಿರಗಾಂವ, ಮುಂಬಯಿ (ಫೋನ್ ನಂ.26314)
ಮೇಲ್ವಿಚಾರಕ ಕಚೇರಿಗಳು:

6.ಒಟ್ಟಾಪಲಂ, ದಕ್ಷಿಣ ಮಲಬಾರ
7.ಸೆಂಟ್ರಲ್ ಸ್ಟೇಶನ್ ರೋಡ್,ತ್ರಿವೇಂದ್ರಮ್"


ಇದರಲ್ಲಿ ವಿಶೇಷವಾಗಿ ವಿಮಾ ಪ್ರತಿನಿಧಿಗಳನ್ನು ಆಹ್ವಾನಿಸುವ ಮತ್ತು ಧಾರಾಳವಾದ ಸಂಭಾವನೆಯನ್ನು ನೀಡುವ ಭರವಸೆಯನ್ನು ನೀಡಲಾಗಿದೆ.




"The Bombay Life Assurance Co Ltd, Bombay (estd 1908) The Office Which has proved its popularity by its progress Record of New Business


| Proposed | Year | Completed |
|---|---|---|
| 1,25,50,250 | 1934 | 10433750 |
| 1,50,48,915 | 1935 | 12328665 |
| 1,68,88,200 | 1936 | 13601500 |
| 1,72,57,975 | 1937 | 14008725 |
| 1,76,83,250 | 1938 | 14491000 |

1939 VALUATION YEAR
Please take up a Policy Now and participate in Bonus..."
ಇದರಲ್ಲಿ ಇತರ ಸಾಮಾನ್ಯ ವಿವರಗಳೊಂದಿಗೆ ಸಂಪಾದಿಸಿದ ಮತ್ತು ಸಂಸ್ಕರಿಸಿದ ವ್ಯವಹಾರದ ಮೊಬಲಗುಗಳನ್ನು ತಿಳಿಸಲಾಗಿದೆ.






ಬಾಂಬೆ ಜೀವ ವಿಮಾ ಕಂಪನಿಯ ಜಾಹಿರಾತುಗಳಲ್ಲಿ ಮುಖ್ಯವಾದ ಮತ್ತೊಂದು ಇದು. ರಜತ ಮಹೋತ್ಸವದ ಸಮಯದಲ್ಲಿ ವಾರ್ಷಿಕ ಪ್ರೀಮಿಯಂನ ಶೇಕಡ 2.5% ರಷ್ಟರ ರಿಯಾಯಿತಿಯ ಮೊಬಲಗನ್ನು ಮುಂದಿನ ವಾರ್ಷಿಕ ವಿಮಾ ಕಂತಿನಿಂದ ಕಡಿಮೆ ಮಾಡುವ ಮೂಲಕ ವಿಮಾ ಲಾಭಾಂಶದ ಹಂಚುವಿಕೆಯ ಒಂದು ಹೊಸ ನಮೂನೆಯನ್ನು ಜನರಿಗೆ ಪರಿಚಯಿಸಿದೆ. ಇದರ ಜೊತೆಗೆ , ವಿಮಾ ಪ್ರತಿನಿಧಿಗಳಿಲ್ಲದ ಜಿಲ್ಲೆಗಳಿಂದ ಉತ್ಸಾಹವಂತರಿಂದ ವಿಮಾ ಪ್ರಾತಿನಿಧ್ಯಕ್ಕೆ ಅರ್ಜಿಗಳನ್ನು ಆಹ್ವಾನಿಸಿದೆ.

**4. ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ**




"ಗೆಲವಿಗೆ ಗೌರವ
ಏಕೀಕೃತ ಕನ್ನಡ ಪ್ರಾಂತಕ್ಕೆ ಕರ್ನಾಟಕದ ಆರ್ಥಿಕ ಸಂಸ್ಥೆಗಳು ಬಲವಾದ ಆಧಾರ.
ಅವುಗಳಲ್ಲಿ ಯುನೈಟೆಡ್ ಕರ್ನಾಟಕ ಇನ್ಶೂರೆನ್ಸ್ ಕಂಪನಿ
ಯಂತಹ ವಿಮಾಸಂಸ್ಥೆಯು ಜನತೆಯ ಧನ ಸಂಪಾದನೆಯ ಶಕ್ತಿಯನ್ನು ಉಳಿಸಿ ಬೆಳೆಸುವುದರಲ್ಲಿ ಹಿರಿದಾಗಿದೆ.
ಕಳೆದ ಹತ್ತು ವರ್ಷಗಳಿಂದಲೂ ಅನೇಕ ಜನರು ವಿಮಾ ರಕ್ಷಣೆಯನ್ನು ಪಡೆದಿರುವರು.
ಎಲ್ಲರಿಗೂ ಸರಿಹೋಗುವ ವಿಮಾ ಯೋಜನೆಗಳಿವೆ. ಕಡಿಮೆ





ಕರ್ನಾಟಕದ ಹೊಸ ಕಂಪನಿಯು!
ಆಯುಷ್ಯದ ವಿಮೆ
ಇಳಿಸುವ ಮುಂಚಿ
THE
United Karnatak Insurance
Company, Limited.
*Head Office* :—DHARWAR
ದಿ ಯುನಾಯಟೆಡ್ ಕರ್ನಾಟಕ ಇನಶೂಅರನ್ಸ ಕಂಪನಿ
ಹೆಡ್ ಆಫೀಸು — ಧಾರವಾಡ
ಈ ಕಂಪನಿಯ ಮಾಹಿತಿಪತ್ರವನ್ನು ತರಿಸಿಕೊಳ್ಳಬೇಕು. ಈ ಕಂಪನಿಯ ಶೇರುಗಳು ಮಾರಲಿಕ್ಕೆ ಸಿಗುವವು. ಜಾಹೀರ ಪತ್ರಿಕೆ ನೋಡಿ ಅರ್ಜಿಯನ್ನು ಮಾಡಬಹುದು.
ಈ ಕಂಪನಿಯ ಯಾವತ್ತು ವಿಮೆಯ ಕೆಲಸ ಮಾಡಲಿಕ್ಕೆ ಪ್ರತಿಯೊಂದು ಜಿಲ್ಲೆ ಮತ್ತು ತಾಲೂಕಿಗೆ ಏಜಂಟರು ಬೇಕಾಗಿದ್ದಾರೆ. ಇಚ್ಛಿಸುವವರು ಕೆಳಗೆ ಇದ್ದ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕು
ಕೃಷ್ಣರಾವ ಹುಯಿಲಗೋಳ
ಸೆಕ್ರೆಟರಿ
ಬೋಧರಾವ ಸಾವಕಾರ ವಕೀಲ
ಚೇರಮನ್
೫೧೧೫, ಮಂಗಳವಾರ ಪೇಟೆ—ಧಾರವಾಡ.

“ಯುನಾಯಿಟೆಡ್ ಕರ್ನಾಟಕ ಇನ್ಸೂರನ್ಸ್ ಕಂ. ಲಿಮಿಟೆಡ್,
ಮುಖ್ಯ ಕಚೇರಿ: ಧಾರವಾಡ ಸಂಯುಕ್ತ ಕರ್ನಾಟಕದ
ಪ್ರತಿನಿಧಿತ್ವವನ್ನು ಪಡೆದ ಮೊಟ್ಟಮೊದಲನೆಯ
ವಿಮಾಸಂಘವೆಂದರೆ ಇದೇ.
ಪ್ರತಿಯೊಬ್ಬ ಕನ್ನಡಿಗನು ತನ್ನದೆಂದು ಹೆಮ್ಮೆಪಡಬಹುದಾದ ಈ
ಸಂಘದಲ್ಲಿಯೇ ವಿಮೆ ಇಳಿಸಿರಿ!
ವಿಮಾ ಕಂತುಗಳ ಮೂಲಕ ಹೊರನಾಡಿಗೆ ಹರಿದುಹೋಗುವ
ಹೊನ್ನಿನ ಹೊಳೆಗೆ ತಡೆಹಾಕಿರಿ!!
ಬ್ಯಾಂಕರ್ಸ್: ದಿ ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ,
ಲಿಮಿಟೆಡ್, ಮುಂಬಯಿ
ಆಕ್ಚುಅರಿ: ಶ್ರೀ. ಜಿ.ಎಸ್.ಮರಾಠೆ,ಎಂ.ಎ(ಮುಂಬಯಿ).,
ಎ.ಐ.ಎ(ಲಂಡನ್),
ಸುಲಭವಾದ ವಿಮಾ ಕಂತುಗಳು! ಸರ್ವ ಸೌಕರ್ಯವುಳ್ಳ
ಕರಾರುಗಳು!
ಕಾರ್ಯಕರ್ತರಾದ ಕುಶಲ ಏಜಂಟರು ಬೇಕು.
ವಿಶೇಷ ವಿವರಗಳಿಗಾಗಿ ಬರೆಯುವುದು.
ಕೆ.ಎಲ್.ಹುಯಿಲಗೋಳ.ಎಲ್.ಎಲ್ ಬಿ, ಸೆಕ್ರೆಟರಿ”


ಕರ್ನಾಟಕದ ಏಕೀಕರಣಕ್ಕೆ ಬಹು ಮುಂಚೆಯೇ ಈ ಜಾಹಿರಾತಿನಲ್ಲಿ “ಸಂಯುಕ್ತ ಕರ್ನಾಟಕ” ಪದದ ಬಳಕೆಯಿದೆ. ಎರಟನೆಯದಾಗಿ ವಿಮಾ ಕಂತುಗಳ ಮೂಲಕ ಸಂಗ್ರಹವಗುವ ಸಂಪತ್ತನ್ನು ಹೊನ್ನಿನ ಹೊಳೆಗೆ ಹೋಲಿಸಿ ಪ್ರಮುಖ್ಯತೆಯನ್ನು ತಿಳಿಸಲಾಗಿದೆ.

ಹಿಂದಿನ ಪುಟದಲ್ಲಿರುವ ಪೂರ್ಣಪುಟದ ಜಾಹಿರಾತಿನಲ್ಲಿನ ಎರಡು ಅಂಶಗಳೆಂದರೆ: ಪಾಲು/ಷೇರುಗಳ ಕೊಳ್ಳುವಿಕೆಯ ಬಗೆಗಿನ ಮಾಹಿತಿ ಮತ್ತು “ಆಯುಷ್ಯ ವಿಮೆ” (ಆಜೀವ ವಿಮೆ/ ವ್ಹೋಲ್ ಲೈಫ್) ಎಂಬ ಪದ ಪ್ರಯೋಗ.




“ಯುನೈಟೆಡ್ ಕರ್ನಾಟಕ ಇನ್ಸೂರೆನ್ಸ್ ಕಂ. ಲಿಮಿಟೆಡ್,ಮುಖ್ಯ ಕಾರ್ಯಾಲಯ–ಧಾರವಾಡ
ಕಳೆದ ಆರು ವರ್ಷಗಳಿಂದಲೂ ಬೆಳೆದು ಬಲಗೊಂಡು ನಿಂತು, ಸರಕಾರದ ಪಂಚ ವಾರ್ಷಿಕ ವಿಮರ್ಶೆಯಲ್ಲಿ ಜಯಶೀಲವಾಗಿರುವ ಕರ್ನಾಟಕದ ಜೀವ ವಿಮಾ ಕಂಪನಿ.
ಈ ಕಂಪನಿಯ ಬಗ್ಗೆ ಜನರಿಗೆ ವಿಶೇಷ ಆಭಿಮಾನವೆನಿಸಲು ಕಾರಣಗಳೇನೆಂದರೆ:
ಕಂಪನಿಯ ಹಣಕ್ಕೆ ಸರಕಾರದ ಆಧಾರ ಪತ್ರಗಳ ಮೂಲಕ ಸಂಪೂರ್ಣ ಸುರಕ್ಷಿತತೆಯಿದೆ. ಪಾಲಿಸಿದಾರರ ಹಕ್ಕಿನ ಹಣವನ್ನು ಸಲ್ಲಿಸುವುದರಲ್ಲಿ ತೊಂದರೆ–ತಡೆಗಳೇ ಇಲ್ಲ. ಏಜಂಟರ ಮತ್ತು ಪ್ರಧಾನ ಕಾರ್ಯಾಲಯದ ವ್ಯವಹಾರದಲ್ಲಿ ಸಮಯಶೀಲತೆಯಿದೆ. ಕನಿಷ್ಠ ವೆಚ್ಚದಿಂದ ವಿಶಿಷ್ಟ ಲಾಭವನ್ನು ಕೊಡುವ ವಿಮಾ ಯೋಜನೆಗಳಿವೆ. ಈ ಕಂಪನಿಯ ಏಳ್ಗೆಯಲ್ಲಿ ಕರ್ನಾಟಕದ ಆರ್ಥಿಕೋನ್ನತಿಯ ಬಲವಾದ ಆಧಾರವಿದೆ.
ಅಲ್ಲದೆ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಇದರ ಪಾಲುದಾರರಿದ್ದು ಇದು ಕನ್ನಡನಾಡಿನ ಪ್ರಾತಿನಿಧಿಕ ಸಂಸ್ಥೆಯಾಗಿದೆ.ಆದುದರಿಂದ ಕನ್ನಡದ ಗೆಲವನ್ನು ಬಯಸುವವರು ‘ಯುನೈಟೆಡ್ ಕರ್ನಾಟಕದ ‘ಪಾಲಿಸಿಗಳನ್ನಾಗಲಿ, ಪಾಲುಗಳನ್ನಾಗಲಿ ಪಡೆಯಬೇಕು; ವಿಶೇಷ ವಿವರಕ್ಕೆ ಕೆಳಗಿನ ವಿಳಾಸಕ್ಕೆ ಬರೆಯಿರಿ:.....”


ಹಿಂದೆ ವಿಮಾ ಉದ್ಯಮದ ನಿರ್ವಹಣೆಯಲ್ಲಿ ಪಂಚವಾರ್ಷಿಕ ವಿಮರ್ಶೆಯೆಂಬ ಪ್ರಕ್ರಿಯೆಯಿದ್ದಂತೆ ತೋರುತ್ತದೆ. “ಕಂಪನಿಯ ಹಣಕ್ಕೆ ಸರಕಾರದ ಆಧಾರಪತ್ರಗಳ ಮೂಲಕ ಸುರಕ್ಷಿತತೆ” ಈ ಹೇಳಿಕೆಯು ಗೊಂದಲವನ್ನುಂಟುಮಾಡುವಂತಿದೆ. ಏಕೆಂದರೆ 1938ರ ವಿಮಾ ಕಾಯ್ದೆಯಲ್ಲಿ ಈ ಬಗೆಯ ಯಾವುದೆ ರಕ್ಷಣೆಯ ಬಗೆಗೆ ವಿವರಗಳಿಲ್ಲ.




“ವಿಮಾ ಸಂಸ್ಥೆಗಳು ಸಂಪತ್ತಿನ ನೆಲೆ, ಕಲೆ ಕೈಗಾರಿಕೆಗಳ ಸೆಲೆ, ನಿಶ್ಚಿಂತ ಜೀವನದ ಸಾಧನೆ, ಪ್ರವಾಸೋದ್ಯಮಗಳ ಬೆನ್ನೆಲುಬು ಮತ್ತು ರಾಷ್ಟ್ರನಿರ್ಮಾಣದ ಪ್ರಮುಖ ಅಂಗವಾಗಿವೆ.
ನಮ್ಮ ಸಂಘದ ಆಡಳಿತಕ್ಕೆ ಕರ್ನಾಟಕದ ಪ್ರತಿಯೊಂದು ಜಿಲ್ಲೆಯ ಮುಂದಾಳುಗಳು ಪ್ರತಿನಿಧಿಗಳಾಗಿ ದೊರೆತಿದ್ದಾರೆ.
ಸುಲಭವಾದ ವಿಮಾ ಕಂತುಗಳು! ಸರ್ವ ಸೌಕರ್ಯವುಳ್ಳ ಕರಾರುಗಳು! ಆದ್ದರಿಂದ ಬೇಗನೇ ಈ ಕಂಪನಿಯಲ್ಲಿ ವಿಮೆ ಇಳಿಸಿರಿ. ಕಾರ್ಯನಿರ್ವಾಹಕರಾದ ಕುಶಲ ಏಜೆಂಟರು ಬೇಕು.”

ಇದರಲ್ಲಿ ವಿಮಾ ಸಂಸ್ಥೆಗಳ ಉಪಯೋಗಗಳನ್ನು ತಿಳಿಸಲಾಗಿದೆ.

**5. ದಿ ಬಾಂಬೆ ಬರೋಡ ಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್, ಬರೋಡ**




"UNEMPLOYMENT OF EDUCATED MIDDLE CLASS is an important item in the news today


Send a Post Card and let us tell you
HOW TO GIVE YOUR BOY A START IN A BUSINESS OR PROFESSION

BOMBAY BARODA ASSURANCE CO LTD

Established: 1925 Head Office :Baroda


Wanted immediately Inspectors, Organisers, Chief Agents and Dist.Agents on most lucrative terms of Salary and Commission throughout Karnataka and Nizam's State."

ಈ ಜಾಹಿರಾತು ಅಂದಿನ ಸಮಾಜದ ಅದರಲ್ಲಿಯೂ ಮದಹಯಮ ವರ್ಗದ ಬವಣೆಯಾಗಿದ್ದ ನಿರುದ್ಯೋಗ ಸಮಸ್ಯೆಗೆ ಉತ್ತಮ ಪರಿಹಾರವನ್ನು ಸೂಚಿಸುತ್ತದೆ. ತಮಗೆ ಅವಶ್ಯಕವಾಗಿರುವ ಇನ್ಸ್‌ಪೆಕ್ಟರ್, ಆರ್ಗನೈಸರ್, ಛೀಫ್ ಏಜೆಂಟ್ಸ್, ಡಿಸ್ಟ್ರಿಕ್ಟ್ ಏಜೆಂಟ್ಸ್ ಗಳನ್ನು ಸಂಬಳ ಮತ್ತು ಕಮೀಷನ್ ನೀಡಿ ನಿಯುಕ್ತಿ ಮಾಡಿಕೊಳ್ಳುವ ವಿವರವನ್ನೂ ನೀಡುತ್ತದೆ.
ಇಲ್ಲಿ ಗಮನಿಸಬೇಕಾದ ಅಂಶವೆಂದರೆ ಇಂದಿನ ವಿಮಾವ್ಯವಸ್ಥೆ ಈ ವಿಚಾರವನ್ನು ಸಂಪೂರ್ಣವಾಗಿ ಮರೆತಿರುವುದು.




ಹಿಂದಿನ ಚಿತ್ರವು "ದಿ ಬಾಂಬೆ ಬರೋಡ ಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್, ಬರೋಡ ,ಈ ಸಂಸ್ಥೆಯು 1925 ರಲ್ಲಿ ಸ್ಥಾಪನೆಗೊಂಡಿತು."ಸುಲಭ ವಿಮಾ ಕಂತುಗಳು ಮತ್ತು ಸರ್ವ ಸೌಕರ್ಯವುಳ್ಳ ಕರಾರುಗಳು" ಎಂಬ ಶಿರ್ಷಿಕೆಯನ್ನು ಹೊತ್ತಿದ್ದು ಹೊಸ ಪ್ರಯೋಗವೋ ಎಂಬಂತೆ "ಉದ್ಯೋಗ"ಕ್ಕೆ ಪ್ರಾಧಾನ್ಯತೆಯನ್ನು ನೀಡಲಾಗಿದೆ.


**6. ದಿ ಗಾರ್ಡಿಯನ್ ಆಫ್ ಇಂಡಿಯ ಇನ್ಶೂರೆನ್ಸ್ ಕಂ.ಲಿಮಿಟೆಡ್**




ಈ ಸಂಸ್ಥೆಯು ನಿಶ್ಚಿತ ವೇತನದ ಭರವಸೆಯನ್ನು ನೀಡಿರುವುದು


ಕಂಡುಬರುತ್ತದೆ.

**7. ಜನರಲ್ ಅಶ್ಯೂರೆನ್ಸ್ ಸೊಸೈಟಿ**




"ಹಿಟ್ಲರನ ಮಹಾಯುದ್ಧದ ಪಶ್ಚಾತ್-ಪರಿಣಾಮಗಳಿಂದ ಪಾರಗಬಯಸುವಿರಾ???
ಹಾಗಾದರೆ"ದಿ ಜನರಲ್"ನಲ್ಲಿ ಹಣ ತೊಡಗಿಸಿ!
ಹೊಸಬರ ಬಣ್ಣ ಬಣ್ಣದ ಮಾತುಗಳಿಗೆ ಮರುಳಾಗದಿರಿ!!" ಎಂಬ ಎಚ್ಚರಿಕೆ ನೀಡುವ ಈ ಸಂಸ್ಥೆಯು 1907 ರಲ್ಲಿ ಸ್ಥಾಪಿತಗೊಂಡು ಅಜ್ಮೀರಿನಲ್ಲಿ ಮತ್ತು ಕಲಕತ್ತೆಯಲ್ಲಿನದು. ಜಾಹಿರಾತಿನಲ್ಲಿ ನೀಡಿದ ಅಂಕಿ-ಅಂಶ ಹೀಗಿದೆ "ನಿಧಿ ರೂ.1 ಕೋಟಿ, ವ್ಯವಹಾರ ರೂ.3.70 ಕೋಟಿಗಳು, ಬೋನಸ್ಸು ರೂ.22 1/2 ಮತ್ತು ರೂ.18 (ಅಜೀವ ಮತ್ತು ಸಂಚಿತ)."

**8. ಲಾಂಗ್ ಲೈಫ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, ಪುಣೆ**
1933ರಲ್ಲಿ ಸ್ಥಾಪಿತವಾದ ಈ ವಿಮಾ ಸಂಸ್ಥೆಯ ಈ ಜಾಹಿರಾತಿನಲ್ಲಿ " ವಿಮೆಯಿಳಿಸುವುದೆಲ್ಲಿ?...... ಲಾಂಗ್ ಲೈಫ್ ಇನ್ಶೂರೆನ್ಸ್ ಕಂಪನಿ ಲಿಮಿಟೆಡ್, ಪುಣೆಯಲ್ಲಿ. ಯಾಕೆ?......" ಎಂಬ ಹೇಳಿಕೆಯೊಂದಿಗೆ





ಆರಂಭಗೊಂಡು ಪ್ರಥಮ ಮೌಲ್ಯಮಾಪನೆಯ ವಿವರಗಳನ್ನು ನೀಡುತ್ತದೆ. "ಪೂರ್ಣಾಯುಷ್ಯ ರೂ.12॥ ಮತ್ತು ಎಂಡೋಮೆಂಟ್ ರೂ.10..ಬೋನಸ್ ಹಂಚಿದ್ದು."
'1. ಸುಲಭ ವಿಮಾ ದರಗಳು
2. ಭದ್ರವಾದ ಆರ್ಥಿಕ ಸ್ಥಿತಿ
3. ಅತ್ಯಲ್ಪ ಪಾಲಿಸಿಗಳು ರದ್ದಾಗುವಿಕೆ
4. ಸ್ತ್ರೀ ವಿಮೆದಾರರಿಗೆ ವಿಶೇಷ ಸೌಕರ್ಯಗಳು
5. ರಾಷ್ಟ್ರೋದ್ಧಾರ ನಿಧಿ' ಎಂಬ ಘೋಷಣೆಯನ್ನೂ ಹೊತ್ತಿದೆ.





"ಸ್ತ್ರೀಯರ ಆರ್ಥಿಕ ಸ್ವಾತಂತ್ರ್ಯಕ್ಕೆ ಸಹಾಯಮಾಡುವ ಹಿಂದೂಸ್ತಾನದೊಳಗಿನ ಆದ್ಯ ವಿಮಾ ಕಂಪನಿಯೆಂದರೇನೇ- ಲಾಂಗ್ ಲಾಯಿಫ್ ಇನ್ಶೂರೆನ್ಸ್ ಕಂಪನಿ
ಸ್ತ್ರೀಯರ ವಿಮೆಯ ಬಗ್ಗೆ ವಿಶೇಷ ಸವಲತ್ತಿನ ಯೋಜನೆಗಳು ಮತ್ತು 'ಮ್ಯಾಟರ್ನಿಟಿ ಬೆನಿಫಿಟ್" ಎಂಬ ಅಭಿನವ ಯೋಜನೆ.
ಸ್ತ್ರೀ ಪುರುಷರಿಗೂ ಬಡವರಿಗೂ ಶ್ರೀಮಂತರಿಗೂ ಸಲ್ಲತಕ್ಕ ಹಗುರಾದ ವಿಮೆಯ ಯೋಜನೆಗಳು.
ಒಳ್ಳೆ ಕರ್ತವ್ಯದಕ್ಷ ಮತ್ತೂ ಕನಿಷ್ಠ ವೆಚ್ಚದ ಕಾರಭಾರ. ಪಾಲಿಸಿದಾರರ ಹಿತರಕ್ಷಣೆಯ ಬಗ್ಗೆ ತುಂಬಾ ದಕ್ಷತೆ. ಪ್ರಾಮಾಣಿಕ ವ್ಯವಹಾರ.
ಈ ಕಾರಣಗಳಿಂದ ಈ ಕಂಪನಿಯು ಅಲ್ಪಾವಧಿಯಲ್ಲಿಯೆ ಜನರ ವಿಶ್ವಾಸಕ್ಕೆ ಪಾತ್ರವಾಗಿದೆ. ಇಲ್ಲಿಯೇ ವಿಮೆ ಇಳಿಸಿರಿ.ಕರ್ನಾಟಕದಲ್ಲೆಲ್ಲ ಕರ್ತವ್ಯದಕ್ಷ ಸ್ತ್ರೀ ಮತ್ತು ಪುರುಷ ಏಜೆಂಟರು ಬೇಕಾಗಿದ್ದಾರೆ"
ಇದರಲ್ಲಿ ಸ್ತ್ರೀಯರ ವಿಮಾ ಅವಶ್ಯಕತೆಗಳ ಬಗಗೆ ಆದ್ಯತೆ ನೀಡಲಾಗಿದೆ.

**9. ಮೈಸೂರು ಇನ್ಶೂರೆನ್ಸ್ ಕಂಪನಿ ಲಿಮಿಟೆಡ್**
ಜಾಹಿರಾತಿನ ಚಿತ್ರ ಮುಂದಿದೆ.
ಈ ಸಂಸ್ಥೆಯು 1933 ರಲ್ಲಿ ಬೆಂಗಳೂರಿನಲ್ಲಿ ಸ್ಥಾಪಿತವಾದದ್ದು.
"ಅದೃಷ್ಟ ಚಕ್ರ ! ಎದುರಿಗೆ ಬಂದ ಹುಲಿ ಹಿಡಿಯುವುದೂ ಸಾಧ್ಯ! ಕಾಡಿಗೆ ಹೋಗಿ ಹುಲಿ ಹೊಡೆಯುವುದೂ ಸಾಧ್ಯ ! ಆದರೆ ಹಾಗಿದ್ದದ್ದು ಹೀಗೆ ತಿರುಗಿದರೆ ಆಯಿತು, ಎಲ್ಲ ತಲೆಕೆಳಗು ! ತಿರುಗುಮುರುಗು !! ಅಂಥ ದುಷ್ಟಗತಿಗೆ ಅವಕಾಶವಿಲ್ಲದಂತೆ ಈಗಲೇ ಒಂದು ರಕ್ಷಾಕವಚವನ್ನು ಕೊಳ್ಳಿರಿ. ಲೋಕವೇ ನಿಮ್ಮನ್ನು ಕೊಂಡಾಡುವುದು. ಆ ರಕ್ಷಾಕವಚವಾವುದು ಬಲ್ಲಿರಾ ???
ನಿಮ್ಮ ವೃದ್ಧಾಪ್ಯಕ್ಕೆ , ನಿಮ್ಮ ಕುಟುಂಬದ ರಕ್ಷಣೆಗೆ, ನಿಮ್ಮ ಮಕ್ಕಳ ವಿದ್ಯಾಭ್ಯಾಸ, ವಿವಾಹಾದಿಗಳಿಗೆ ನೆರವಾಗಬಲ್ಲ ನಮ್ಮ 'ವಿಮಾ




ಪಾಲಿಸಿ". ಆ ಪಾಲಿಸಿಯೊಂದಿದ್ದರೆ ಸಾಕು– ನಿಮ್ಮ ಭವಿಷ್ಯ ರಕ್ಷಣೆಯಾಗುವುದು. ಆದ್ದರಿಂದ ಇಂದೇ ಒಂದು ಪಾಲಿಸಿಯನ್ನು ಪಡೆಯಿರಿ.

ಹೆಚ್ಚಿನ ವಿವರಗಳಿಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ:
ಮೈಸೂರು ಇನ್ಸೂರೆನ್ಸ್ ಕಂಪನಿ ಲಿಮಿಟೆಡ್,
ಪ್ರಧಾನ ಕಚೇರಿ: "ಲಕ್ಷ್ಮೀಸ್ಥಾನಂ" ಲಾಲ್‌ಬಾಗ್ ಫೋರ್ಟರೋಡ್ ಸ್ಕ್ವೇರ್, ಬೆಂಗಳೂರು ಸಿಟಿ,
ಹೈದರಾಬಾದ್ ಆಫೀಸು: ಷಹರ್–ಎ–ಉಸ್ಮಾನಿಯ, ಹೈದರಾಬಾದ್–ಡೆಕ್ಕನ್; ಕೊರ್ಚಿ ಆಫೀಸು: ದರ್ಬಾರ್ ಹಾಲ್ ರೋಡ್,ಎರ್ನಾಕುಲಂ (ಕೊರ್ಚಿ);
The Mysore Insurance Company Limited, H.O. Bangalore City"




"ಎಲ್ಲೆಲ್ಲೂ ಯುದ್ಧ!

ಎಲ್ಲ ಯುದ್ಧೋದ್ಯಮಿಗಳ ಗುರಿಯೂ ವಿಜಯ! ಆದರೆ ವಿಜಯ ಯಾರಿಗೆ?
ಅವಿರತ ಶ್ರಮಕ್ಕೆ ಸಿದ್ದವಾದ ಸಂತತ ಸಹಿಷ್ಣು ಬಲವುಳ್ಳ ಸುವ್ಯವಸ್ಥ ಯೋಧಬಲ ಯಾರಿಗಿದೆಯೋ ಅವರಿಗೆ! ಹಾಗೆ ನೀವಿಂದು ಇಂದಿನ ಯುದ್ಧಕಾಲದಿಂದ ಸುಸೂತ್ರವಾಗಿ ಪಾರಾಗಿ ಜೀವನ ಯುದ್ದದಲ್ಲಿ ಜಯಶಾಲಿಗಳಾಗಬೇಕಾದರೆ ಏನು ಮಾಡಬೇಕು ಗೊತ್ತೆ?
ಸಕಲ ಬಲಯುತ ಸಕಲ ಶಸ್ತ್ರ ಸಜ್ಜಿತವಾದ "ವಿಮಾ ಯೋಧನ ಬೆಂಬಲ" ನಿಮಗಿರುವಂತೆ ನೋಡಿಕೊಳ್ಳಬೇಕು.
ಪಾಲಿಸಿ ಪಡೆದಿದ್ದರೆ ನಿಲ್ಲಿಸದೆ ನಡಿಸಿಕೊಂಡು ಬನ್ನಿ.
ಅಂತೆ ಪಾಲಿಸಿ ಪಡೆಯದಿದ್ದರೆ ಕೂಡಲೆ ತೆಗೆದುಕೊಳ್ಳಿ . ವಿಶೇಷ ವಿವರಗಳಿಗೆ: ಮೈಸೂರು ಇನ್ಸೂರೆನ್ಸ್ ಕಂಪನಿ, ಲಿಮಿಟೆಡ್
ಮತ್ತು ಮೈಸೂರು ಪ್ರಾವಿಡೆಂಟ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ ಪ್ರಧಾನ ಕಾರ್ಯಾಲಯ: "ಲಕ್ಷ್ಮೀ ಸ್ಥಾನಂ", ಲಾಲ್‌ಬಾಗ್ ಕೋಟೆ ರಸ್ತೆ, ಬೆಂಗಳೂರು ನಗರ ಪ್ರಾವಿಡೆಂಟ್ ಕಂಪನಿಯ ಬ್ರಿಟಿಷ್ ಭಾರತದ ಕಚೇರಿ: ಕರವೀರ ಶೆಟ್ಟಿ ಬಿಲ್ಡಿಂಗ್ಸ್, ಜವಳಿ ಚೌಕ, ಹುಬ್ಬಳ್ಳಿ ಉಪ ಕಚೇರಿಗಳು:6549, ಕಿಂಗ್ಸ್ ವೇ. ಸಿಕಂದರಾಬಾದ್ . ಚಿತ್ತೂರು ರೋಡು . ಎರ್ನಾಕುಲಂ ಸೌಕರ್ಯವಾದ ಷರತ್ತುಗಳ ಮೇಲೆ ಉತ್ತಮ ಪ್ರತಿನಿಧಿಗಳು ಬೇಕು "

ಇದೇ ಸಂಸ್ಥೆಯ ಇನ್ನೊಂದು ಜಾಹಿರಾತು ಕೆಳಗಿನಂತಿದೆ.
ಪೂರ್ಣ ಚಿತ್ರ ಮುಂದಿನ ಪುಟದಲ್ಲಿದೆ
"ಮೈಗಾವಲು
ಜೀವನ ಸಾಗರದಲ್ಲಿಯ ಮರಣ ಸುಳಿ ತಪ್ಪಿಸಿಕೊಳ್ಳಲು ಯಾರಿಂದ ಸಾಧ್ಯ! ಹುಟ್ಟಿದವರು ಸಾಯಲೇ ಬೇಕು– ಇದು ವಿಧಿ ನಿಯಮ. ಆದರೆ ಮರಣ ದಿನದ ಭವಿಷ್ಯ ನುಡಿಯಲು ಯಾರಿಂದಲೂ ಅಸಾಧ್ಯ !

ಅಂತೆ ಈ ಅನಿರೀಕ್ಷಿತ ಪಾಪವಶಿಗಳಾದ ನಾವು ಮುಂಜಾಗ್ರತೆಯಿಂದ ಜೀವನ ಕರ್ತವ್ಯದ ಸುಗಮ ನಿರ್ವಹಣದೇರ್ಪಾಡಿಗೆ ಅವಕಾಶ ಮಾಡಿಕೊಡಬೇಕಾದುದು ಅಗತ್ಯವಲ್ಲವೆ?

ವೃದ್ಧಾಪ್ಯದಲ್ಲಿ ನಿಶ್ಚಿಂತತೆಯ ಜೀವನ
ಸತಿಸುತರ ಜೀವನ ರಕ್ಷಣಾ ಭರವಸೆ
ಮಕ್ಕಳ ವಿವಾಹ ವಿದ್ಯಾಭ್ಯಾಸಾದಿಗಳಿಗೆ ಸೌಕರ್ಯಕಲ್ಪನೆ
ಈ ಎಲ್ಲವುಗಳ ಏರ್ಪಾಡಿಗೆ ನೆರವಾಗಲು ಆಧುನಿಕ ಅರ್ಥಶಾಸ್ತ್ರವು ತನ್ನ ಬೊಕ್ಕಸದಿಂದ ತೆಗೆದಿಟ್ಟಿರುವ
ಜೀವ ವಿಮೆಯ
ಮೈಗಾವಲು ಪಡೆಯಿರಿ

ವಿವರಗಳಿಗೆ
ಕರ್ನಾಟಕದ ಖ್ಯಾತಿಯ ಸಂಸ್ಥೆಗಳು:
ಮೈಸೂರು ಇನ್ಸೂರೆನ್ಸ್ ಕಂಪನಿ, ಲಿಮಿಟೆಡ್
ಮತ್ತು ಮೈಸೂರು ಪ್ರಾವಿಡೆಂಟ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್"

ಇದೇ ಸಂಸ್ಥೆಯ ಇನ್ನೊಂದು ಚಿತ್ರಮಯ ಜಾಹಿರಾತು ಹೀಗಿದೆ.

ಮೈಗಾವಲು ★

ಜೀವನ ಸಾಗರದಲ್ಲಿಯ

# ಮರಣ ಸುಳಿ

## ತಪ್ಪಿಸಿಕೊಳ್ಳಲು ಯಾರಿಂದ ಸಾಧ್ಯ!



★ ಹುಟ್ಟಿದವರು ಸಾಯಲೇ ಬೇಕು—ಇದು ವಿಧಿನಿಯಮ.

★ ಆದರೆ ಮರಣದಿನದ ಭವಿಷ್ಯ ನುಡಿಯಲು ಯಾರಿಂದಲೂ ಅಸಾಧ್ಯ!

★ ಅಂತೆ ಈ ಅನಿರೀಕ್ಷಿತ ಪಾಶವಶಿಗಳಾದ ನಾವು ಮುಂಜಾಗ್ರತೆಯಿಂದ ಜೀವನ ಕರ್ತವ್ಯದ ಸುಗಮ ನಿರ್ವಹಣದೇರ್ಪಾಡಿಗೆ ಅವಕಾಶ ಮಾಡಿ ಕೊಡಬೇಕಾದುದು ಅಗತ್ಯವಲ್ಲವೆ?

- ವೃದ್ಧಾಪ್ಯದಲ್ಲಿ ನಿಶ್ಚಿಂತೆಯ ಜೀವನ
- ಸತಿಸುತರ ಜೀವನ ರಕ್ಷಣಾ ಭರವಸೆ
- ಮಕ್ಕಳ ವಿವಾಹ ವಿದ್ಯಾಭ್ಯಾಸಾದಿಗಳಿಗೆ ಸೌಕರ್ಯಕಲ್ಪನೆ

★ ಈ ಎಲ್ಲವುಗಳ ಏರ್ಪಾಡಿಗೆ ನೆರವಾಗಲು ಆಧುನಿಕ ಅರ್ಥಶಾಸ್ತ್ರವು ತನ್ನ ಬೊಕ್ಕಸದಿಂದ ತೆಗೆದಿಟ್ಟಿರುವ

# ಜೀವ ವಿಮೆಯ
## ಮೈಗಾವಲು ಪಡೆಯಿರಿ.

ವಿವರಗಳಿಗೆ—

**ಕರ್ನಾಟಕದ ಖ್ಯಾತಿಯ ಸಂಸ್ಥೆಗಳು**


## ದಿ ಮೈಸೂರು ಪ್ರಾವಿಡೆಂಟ್ ಇನ್ಶೂರೆನ್ಸ್ ಕಂಪೆನಿ, ಲಿ.,

ಮತ್ತು

## ದಿ ಮೈಸೂರು ಇನ್ಶೂರೆನ್ಸ್ ಕಂಪೆನಿ, ಲಿ.

| ಪ್ರಧಾನ ಕಛೇರಿ: | ಪ್ರಾವಿಡೆಂಟ್ ಕಂಪೆನಿಗೆ ಬ್ರಿಟಿಷ್ ಭಾರತಕ್ಕೆ ಮುಖ್ಯ ಕಛೇರಿ: | ಉಪಕಛೇರಿ: | ಆರ್ಗನೈಜಿಂಗ್ ಆಫೀಸು: |
|---|---|---|---|
| ಲಕ್ಷ್ಮೀಸ್ಥಾನಂ, ಲಾಲ್‌ಬಾಗ್ ಕೋಟೆರಸ್ತೆ **ಬೆಂಗಳೂರು** ನಗರ | ಕರವೀರಶೆಟ್ಟಿ ಬಿಲ್ಡಿಂಗ್ಸ್ ಜವಳಿಚೌಕ, **ಹುಬ್ಬಳ್ಳಿ** | ಓಬಳ್, ಕಿಂಗ್ಸ್‌ವೇ **ಸಿಕಂದರಾಬಾದು** | ಚಿತ್ತೂರು ರೋಡ್ **ಎರ್ನಾಕುಲಂ** |

ಬಹು ಸೌಕರ್ಯವಾದ, ಉತ್ತಮ ಸೌಲಭ್ಯಗಳುಳ್ಳ ಮತ್ತು ಲಾಭದಾಯಕವಾದ ಷರತ್ತುಗಳ ಮೇ
**ಕನ್ನಡದ** ಈ ಸಂಸ್ಥೆಗೆ ಪ್ರತಿನಿಧಿಗಳು ಬೇಕಾಗಿದ್ದಾರೆ.




ಕರ್ನಾಟಕದ ಸಾಹಸ! ಕರ್ನಾಟಕದ ಕೀರ್ತಿ !!

“ಮೈಸೂರು ಇನ್ಸೂರೆನ್ಸ್ ಕಂಪೆನಿ”

ಪೋಷಕರಿಗೂ ದೇಶಕ್ಕೂ ನಿರ್ವಂಚಿತವಾದ ಶ್ರದ್ಧಾಯುತ ಸೇವೆ ಸಲ್ಲಿಸಲು ಆಡಳಿತಮಂಡಳಿಗಿರುವ ಉತ್ಸಾಹವೇ “ಮೈಸೂರು” ಅಭ್ಯುದಯದ ಜೀವಾಳ.

ಮೂರನೇ ವರ್ಷದ ಡೈರೆಕ್ಟರುಗಳಿಂದ ಅಂಗೀಕೃತವಾದ ವರದಿಯ ಕೆಲವು ಮುಖ್ಯಾಂಶಗಳು.

(1) ಕಳೆದ ವರ್ಷಕ್ಕಿಂತ ಜೀವ ವಿಮಾ ನಿಧಿಯು ಶೇಕಡ 22 ರಷ್ಟು ಏರಿದೆ.

(2) ಹೊಸ ಉದ್ಯಮವು ಶೇಕಡ 65 ರಷ್ಟು, ಪೂರ್ಣವಾದ ಉದ್ಯಮವು ಶೇಕಡ 53ರ ಷ್ಟು ಏರಿದೆ

(3) ಆಸ್ತಿ ರೂ.1 ಲಕ್ಷಕ್ಕೆ ಮಿರಿದೆ

ಕಾರ್ಯಕ್ಷೇತ್ರವು ವಿಸ್ತಾರಗೊಳ್ಳುತ್ತಿದೆ.

“ಮೈಸೂರು” ಮಾದರಿ ಸಂಸ್ಥಾನದಲ್ಲಿ ತನ್ನ ಸ್ಥಾನವನ್ನು ಭದ್ರಪಡಿಸಿಕೊಂಡು, ಕರ್ನಾಟಕದ ಇತರ ಭಾಗಗಳಲ್ಲೂ , ಬ್ರಿಟಿಷ್ ಇಂಡಿಯಾ, ಬರ್ಮಾ,ಸಿಲೋನ್‌ಗಳಲ್ಲೂ ವಿಜಯಿಯೆನಿಸಲು ಮುಂದಡಿಯಿಟ್ಟಿದೆ.

ಬೇಕು ! ಕರ್ನಾಟಕದ ಎಲ್ಲ ಊರುಗಳಲ್ಲೂ, ಉಳಿದ ಬ್ರಿಟಿಷ್ ಇಂಡಿಯಾ, ಬರ್ಮಾ,ಸಿಲೋನ್‌ಗಳ ಎಲ್ಲ ಪ್ರಾಂತ್ಯಗಳಲ್ಲೂ ಕೇಂದ್ರ ಸ್ಥಳಗಳಲ್ಲೂ ಏಜೆಂಟರುಗಳೂ, ಸ್ಪೆಷಲ್ ಏಜೆಂಟರುಗಳೂ, ಚೀಫ್ ಏಜೆಂಟರುಗಳೂ, ಆರ್ಗ್ನೈಜರುಗಳೂ ಬೇಕು. ಪ್ರತಿನಿಧಿಗಳಾಗಲಿಚ್ಛಿಸುವವರು, ತಾವು ಕೊಡುವ ಉದ್ಯಮದ ಭರವಸೆಯನ್ನೂ ಕಾರ್ಯಕ್ಷೇತ್ರವನ್ನೂ ತಿಳಿಸುವುದು.


ವಿವರಗಳಿಗೆ ಬರೆಯಿರಿ:

ಮೈಸೂರು ಇನ್ಸೂರೆನ್ಸ್ ಕಂಪನಿ ಲಿಮಿಟೆಡ್, ನಾಗೇಶ್ವರ್ ಬಿಲ್ಡಂಗ್ಸ್, ನರಸಿಂಹರಾಜ ರೋಡ್, ಬೆಂಗಳೂರು ಸಿಟಿ.”

ಇನ್ನೊಂದು ಜಾಹಿರಾತನ್ನು ನೋಡಿ.


“ಮೈಸೂರಿನ ಮುನ್ನಡೆ !”

ಮೈಸೂರು ಇನ್ಸೂರೆನ್ಸ್ ಕಂಪನಿಯು ನಿಸ್ಸಂದೇಹವಾಗಿ ಇದು ಭರತ ಖಂಡದ ಸುಭದ್ರವಾದ ಕಂಪನಿಗಳಲ್ಲೊಂದಾಗಿದೆ” –“ಇನ್ಸೂರೆನ್ಸ್ ರೆಡ್ ಬುಕ್”–




ವಿಮೆಯು ಎಲ್ಲೆಲ್ಲಿಯೂ ನಲಿಯಬೇಕೆಂಬ ಗುರಿಯಿಂದ ಸರ್ವಜನ ಸುಲಭವಾದ ನೂತನ ವಿಮಾ ಪದ್ಧತಿಗಳನ್ನು ಜಾರಿಗೆ ತರಲಾಗಿದೆ. ಸಾಲಿಯಾನ ಸಾವಿರಕ್ಕೆ 25ರ ನಗದಿ ಬೋನಸ್ಸು ಪಾಲಿಸಿ, ಟ್ರಿಪಲ್ ಬೆನಿಫಿಟ್ ಪಾಲಿಸಿ, ಮಕ್ಕಳ ಎಂಡೋಮೆಂಟ್ ಪಾಲಿಸಿ, ಹೋಪ್ ಅಂಡ್ ಪ್ರೋಗ್ರೆಸ್ ಪಲಿಸಿ ಸಕ್ಸೆಷನ್ ಪಾಲಿಸಿ ಇತ್ಯಾದಿ, ಇತ್ಯಾದಿ.
“ಮೈಸೂರಿ”ನ ಸೇವಾ ತತ್ಪರತೆಯೂ, ಸುಭದ್ರತೆಯೂ “ಆದರ್ಶ ಸಂಸ್ಥಾನದ ಆದರ್ಶ ಸಂಸ್ಥೆ” ಎಂಬ ಕೀರ್ತಿಯನ್ನು ಗಳಿಸಿದೆ.
ಆದರ್ಶ ಸಂಸ್ಥಾನದ ಈ ಆದರ್ಶ ಸಂಸ್ಥೆಯ ಪಾಲಿಸಿದಾರರೂ, ಪ್ರತಿನಿಧಿಗಳೂ ಆಗಿ ಸ್ವತಂತ್ರರಾಗಿರಿ..ಹೆಚ್ಚು ವಿವರಗಳಿಗೂ, ನೂತನ ಪ್ರಾಸ್ಪೆಕ್ಟಸ್‌ಗೂ ಈ ವಿಳಾಸಕ್ಕೆ ಬರೆಯಿರಿ ..”

ಇನ್ನೊಂದು ಜಾಹಿರಾತನ್ನು ನೋಡಿ.





“ಸುಳಿಗಾಳಿ..
ಸುಳಿಗಾಳಿ ಚೈತ್ರದೊಳ್ ವೈಶಾಖದೊಳು ಬೇಗೆ
ಬಳಬಳ ಜಡಿಮಳೆ ಶಿಡಿಲೆಷ್ಟು ಜ್ಯೇಷ್ಠಕೆ?
ಎಷ್ಟಾದರೇನು ಗಾಳಿ ಮಳೆ
*ಶಿಡಿಲೂ ಬರಲೇಳಿ– ಏನಾದರೂ ಹೆದರುವುದಿಲ್ಲ. ಒಂದೇ ವರ್ಷದಲ್ಲಲ್ಲ; ಇಡೀ ಜೀವಮನದಲ್ಲೇ ಬರಲಿ! ಹೆದರುವವರಾರು? ಏರು,ಇಳಿತ,ಕಷ್ಟ,ನಷ್ಟ,ಖರ್ಚು,ವೆಚ್ಚ ಏನೇ ಬರಲಿ– ಬೆದರುವುದೇ ಇಲ್ಲ– ಎಂದು ಎದೆತಟ್ಟಿ ಹೇಳುವವರಾರು?
ಅಂಥವವರೂ ಇದ್ದಾರೆ. ಒಂದೇ ಮಾತಿನಲ್ಲಿ ಇಲ್ಲವೆನ್ನಬೇಡಿರಿ. ಅವರಾರು? ಅರ್ಥ ಪ್ರಪಂಚದಲ್ಲಿ ಅರಿತು ನುರಿತ ನಮ್ಮಲ್ಲಿ ಸಲಹೆ ತೆಗೆದುಕೊಂಡವರು. ನಮ್ಮ ‘ಸಕ್ಸೆಷನ್ ಪಾಲಿಸಿ’ ಒಂದನ್ನು ತೆಗೆದುಕೊಂಡಿದ್ದರೆ ಸಾಕು. ಇನ್ನೇನೂ ಬೇಡವೆ ಬೇಡ.

*ಇಷ್ಟೇ ಅಲ್ಲ. ನಿಮ್ಮ ವೃದ್ಧಾಪ್ಯಕ್ಕೂ ,ಕುಟುಂಬ ರಕ್ಷಣೆಗೂ, ಮಕ್ಕಳ ವಿದ್ಯಾಭ್ಯಾಸ ಮತ್ತು ವಿವಾಹಾದಿಗಳಿಗೂ ಹಣವನ್ನು ಕೂಡಿಟ್ಟು ನಿಮಗೆ ಆಪತ್ಕಾಲದಲ್ಲಿ ಕೊಡಲು ವಿಧವಿಧವಾದ ಅತಿ ಸುಲಭವಾದ ವಿಮಾ ಪದ್ಧತಿಗಳನ್ನು ಏರ್ಪಡಿಸಲಾಗಿದೆ.
ಹೆಚ್ಚು ವಿವರಗಳಿಗೆ ಇಂದೇ ಕೆಳಗಿನ ವಿಳಾಸಕ್ಕೆ ಬರೆಯಿರಿ:...”

**10. ದಿ ನ್ಯಾಶನಲ್ ಇನ್ಸೂರೆನ್ಸ ಕಂಪನಿ ಲಿಮಿಟೆಡ್,**
(ಚಿತ್ರ ಮುಂದಿನ ಪುಟದಲ್ಲಿ)
ದಿ ನ್ಯಾಶನಲ್ ಇನ್ಸೂರೆನ್ಸ ಕಂಪನಿ ಲಿಮಿಟೆಡ್,
ಸ್ಥಾಪನೆ–1906
ಚೀಫ್ ಅಫೀಸ್: 7, ಚರ್ಚ್ ಲೇನ್, ಕಲ್ಕತ್ತಾ, ಚೀಫ್ ಏಜೆನ್ಸಿ ಆಫೀಸ್: ದುರ್ಗದ ಬೈಲು, ಹುಬ್ಬಳ್ಳಿ
ಮೂಲಧನ 10,00,000 ರೂಪಾಯಿ
ಇಷ್ಟು ಭರಭರಾಟೆಯಿಂದ ನಡೆದ ಕಂಪನಿಯು
ಬೇರೊಂದಿಲ್ಲವೆಂಬುದು ಕೆಳಗೆ ಕೊಟ್ಟ ಅಂಕೆಗಳಿಂದ ಕೂಡಲೆ ಕಂಡುಬರುವುದು. (ರೂಪಾಯಿಗಳು ಲಕ್ಷಗಳಲ್ಲಿ)


| ವರ್ಷ | ವ್ಯವಹಾರ | ಪ್ರೀಮಿಯಂ | ಅಸೆಂಬ್ಲಿ | ಉತ್ಪನ್ನ |
|---|---|---|---|---|
| 1910 | 10ಲಕ್ಷ | 2ಲಕ್ಷ | 8ಲಕ್ಷ | 1ಲಕ್ಷ |
| 1915 | 20ಲಕ್ಷ | 4ಲಕ್ಷ | 16ಲಕ್ಷ | 2ಲಕ್ಷ |
| 1920 | 40ಲಕ್ಷ | 8ಲಕ್ಷ | 32ಲಕ್ಷ | 4ಲಕ್ಷ |
| 1925 | 80ಲಕ್ಷ | 16ಲಕ್ಷ | 64ಲಕ್ಷ | 8ಲಕ್ಷ |
| 1926 | 1ಕೋಟಿ | 25ಲಕ್ಷ | 1.25ಕೋಟಿ | 20ಲಕ್ಷ |

ಹಯಾತಿಯ ವಿಮೆಗಳ ಮೇಲೆ 100ಕ್ಕೆ 15 ರೂಪಾಯಿಯಂತೆಯೂ ಇಂತಿಷ್ಟು ವರ್ಷಕ್ಕೆಂದು ಗೊತ್ತುಪಡಿಸಿದ ವಿಮೆಗಳ ಮೇಲೆ 10 ರೂಪಾಯಿಗಳ ಮೇಲೆಯೂ ಬೋನಸ್ ಕೊಡಲ್ಪಟ್ಟಿತು. ಕಂಪನಿಯ ಹಣವು ಸರಕಾರಿ ಬೇಂಕ್ ಮುಂತಾದ ಪತ್ತಿನ ಸ್ಥಳಗಳಲ್ಲಿ ಠೇವು ಇಡಲ್ಪಟ್ಟಿದೆ.
ಕಂಪನಿಯ ವಿಶೇಷಗಳು: (1) ಎಲ್ಲದಕ್ಕೂ ಸುಲಭ ಕಂತುಗಳು (2) ಲಾಭವು ಎಲ್ಲ ಪಾಲಿಸಿದಾರರಲ್ಲಿ ಹಂಚಲ್ಪಡುವವು.
(3)ಪಾಲಿಸಿಗಳ ಮೇಲೆ ಸುಲಭ ಬಡ್ಡಿ ದರದಿಂದ ಸಾಲ ಕೊಡಲ್ಪಡುವುದು. (4) ಬರತಕ್ಕ ಹಣವು ತೀವ್ರ ಕೈಸೇರುವುದು.
ಏಜೆಂಟರು ಬೇಕು: ಧಾರವಾಡ ಬೆಳಗಾಂವಿ, ವಿಜಾಪುರ,ಸೊಲ್ಲಾಪುರ ಕಾರವಾರ ಜಿಲ್ಲೆಗಳಲ್ಲಿಯೂ ತಾಲ್ಲೂಕುಗಳಲ್ಲಿಯೂ ಕೆಲಸಮಾಡಲು ಏಜೆಂಟರು ಬೇಕು. ಅವರಿಗೆ ವಿಶೇಷ ಸವಲತ್ತುಗಳನ್ನು ಕೊಟ್ಟು ಬಹಳ ಕಮೀಷನ್ ಕೊಡುವೆವು.
ವಿಳಾಸ: ಮುಂಡರಗಿ ಮತ್ತು ಶಿರಾಳಕೊಪ್ಪ, ಚೀಫ್ ಏಜೆಂಟ್ಸ್, ದಿ ನ್ಯಾಶನಲ್ ಇನ್ಸೂರೆನ್ಸ ಕಂಪನಿ ಲಿಮಿಟೆಡ್, ಹುಬ್ಬಳ್ಳಿ”




ಇದರಲ್ಲಿ ಸಾಮಾನ್ಯ ವಿಮಾ ದತ್ತಾಂಶಗಳ ಜೊತೆಗೆ ಕೆಲವು ವಿಶೇಷ ಅಂಶಗಳನ್ನು ಗಮನಿಸಬಹುದಾಗಿದೆ. ಅವೆಂದರೆ: ಎಲ್ಲ ಪಾಲಿಸಿಗಳೂ ಲಾಭಾಂಶ ಸಹಿತ ಪಾಲಿಸಿಗಳು; ಪಾಲಿಸಿಗಳ ಮೇಲೆ ಸಾಲ ದೊರೆಯುವ ಸೌಲಭ್ಯ, ದಾವೆಗಳ ಕ್ಷಿಪ್ರ ವಿಲೇವಾರಿ. ಇಲ್ಲಿ ಅಸೆಂಬ್ಲಿ, ಉತ್ಪನ್ನ, ಹಯಾತಿ ಎಂಬ ವಿಶೇಷ ಪದಗಳ ಪ್ರಯೋಗವಿದೆ.

**11. ದಿ ಡಾವ್ನ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ ಕಂಪನಿ ಲಿಮಿಟೆಡ್,**




"ಬೇಕು!
ಇವರ ಅತ್ಯಾಕರ್ಷಕ ಮತ್ತು ತುಂಬ ಲಾಭದಾಯಕ 'ರೆಂಟ್–ಪರ್ಚೇಸ್ ಹೌಸ್ ಸ್ಕೀಮ್' (ಬಾಡಿಗೆ ಕೊಡುತ್ತ ಮನೆ ಮಾಲಕರಾಗುವ ಗೃಹ ಯೋಜನೆ)ಗಾಗಿ ಕೆಲಸ ದೊರಕಿಸಲು ಎಲ್ಲಾ ಕಡೆ ಆರ್ಗನೈಜರು ಬೇಕು. ದಕ್ಷ, ಕಾರ್ಯಕ್ಷಮ, ಪ್ರಾಮಾಣಿಕ ಕೆಲಸಗಾರರಿಗೆ ಯೋಗ್ಯ ಸಂಬಳವನ್ನಾಗಲೀ ಕೆಲಸವನ್ನಾಗಲೀ ಕೊಡುವೆವು.ಪ್ರಾಸ್ಪೆಕ್ಟಸಿಗಾಗಿ ಮತ್ತು ಏಜೆನ್ಸಿ ದರಗಳಿಗಾಗಿ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ. ಬ್ರಾಂಚ್ ಸೆಕ್ರೆಟರಿ, ದಿ ಡಾನ್ ಆಫ್ ಇಂಡಿಯಾ ಲೈಫ್ ಇನ್ಶೂರೆನ್ಸ ಕಂಪನಿ ಲಿಮಿಟೆಡ್,ಬ್ರಾಂಚ್ ಆಫೀಸ್,ಬೆಳಗಾವಿ."

**12. "ದಿ ಏಶಿಯಾಟಿಕ್ ಗೌರ್ನಮೆಂಟ್ ಸೆಕ್ಯೂರಿಟಿ ಲಾಯಿಫ್ ಅಶ್ಯೂರೆನ್ಸ ಕಂಪನಿ**

"ದಿ ಏಶಿಯಾಟಿಕ್ ಗೌರ್ನಮೆಂಟ್ ಸೆಕ್ಯೂರಿಟಿ ಲಾಯಿಫ್ ಅಶ್ಯೂರೆನ್ಸ ಕಂಪನಿ, ಬೆಂಗಳೂರು" ಈ ಸಂಸ್ಥೆಯ ಪ್ರಕಟಣೆಯಿಂದ ಈ ಮುಂಚೆ ಈ ಸಂಸ್ಥೆಗೆ "ಮೈಸೂರು ಗೌರ್ನಮೆಂಟ್ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರೇಜ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್" ಎಂಬ ಹೆಸರಿತ್ತೆಂದು ತಿಳಿದುಬರುತ್ತದೆ. ಅಗಸ್ಟ 1924ರ ಪ್ರಕಟಣೆಯೊಂದು ಇದನ್ನು ಪುಷ್ಟೀಕರಿಸುತ್ತದೆಯಾದರೂ ಲಭ್ಯವಿರುವ ದಾಖಲೆಗಳ ಪ್ರಕಾರ ಈ ಸಮಸ್ಥೆಗಳ ಬಗೆಗೆ ಹೆಚ್ಚಿನ ವಿವರಗಳೇನೂ ದೊರೆಯುವುದಿಲ್ಲ.

R. N. B. 1690.

ಜಯಕರ್ನಾಟಕ, [illegible]

# ಪ್ರಕಟನೆ

( ಈ ಮೊದಲಿನ ಮೈಸೂರ ಗೌರ್ನಮೆಂಟ ಸೆಕ್ಯೂರಿಟಿ ಲೈಫ್ ಅಂಡ್ ಮ್ಯಾರೇಜ್ ಅಸ್ಯೂರೆನ್ಸ್ ಕಂಪನಿ ಲಿಮಿಟೆಡ್, ಮೈಸೂರು ಎಂದಿದ್ದ )

## ದಿ ಏಶಿಯಾಟಿಕ್ ಗೌವರ್ನಮೆಂಟ ಸೆಕ್ಯೂರಿಟಿ ಲಾಯಿಫ ಇಶ್ಯೂರನ್ಸ ಕಂಪನಿ ಬೆಂಗಳೂರ.

ಈ ಕಂಪನಿಯು ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು

೧೯೩೬ನೆಯ ಇಸ್ವಿಯ ಜುಲೈ ೩೧ನೆಯ ತಾರೀಖಿನ ದಿವಸ

ಸಾಯಂಕಾಲ ೫-೩೦ ಗಂಟೆಗೆ ಈ ಕಂಪನಿಯ

ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ

ಸಿಟೀ ಮ್ಯಾಜಿಸ್ಟ್ರೇಟರಾದ

ಶ್ರೀ. ಬಿ. ಬಸವಾರಾಧ್ಯ, ಬಿ. ಎ., ಬಿ. ಎಲ್.,

ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ

ಸದ್ಗೃಹಸ್ಥರಿಂಗೆ ೧೦೦೦ ರೂ. ಗಳ

ಸಾಲವು ದೊರೆಯಬೇಕೆಂದು

ನಿರ್ಣಯವಾಯಿತು.

(೧) ಬಾಂಡ ನಂ. ೧೧೬೦೩ ಶ್ರೀ. ಆರ್. ಜಿ. ಹುಕ್ಕೇರಿ ಬುಕ್ಕಸೆಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ.

(೨) ಬಾಂಡ ನಂ. ೧೧೫೪೫ ಶ್ರೀ. ಧೀರಜರಾವ ನಾರಭಿರಾಮ ನಾಯಕ ಕಂಪೌಂಡರ, ಆಲವಾದ ದವಾಖಾನೆ ವಾಯು, ಸಯಣ, ಬಿ. ಬಿ. ಸಿ. ಆಯ. ರೇಲ್ವೆ, ಸುರತ ( ಬಡೋದಾ ಎಜನ್ಸಿ ).

(೩) ಬಾಂಡ ನಂ. ೧೧೫೬೬ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಪೀಠಪುರಂ ಗೊಂದಾವರಿ ಜಿಲ್ಲಾ.

(೪) ಬಾಂಡ ನಂ. ೧೭೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದಪುರ ಶಾಕಿನಾಡು.


(೫) ಬಾಂಡ ನಂ. ೪೩೭೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಛೋಪಯ್ಯಾ ಅಗ್ರಹಾರ, ಅಮಲಾಪುರಮ.

ಬಿ. ಎನ್. ಆರಾಧ್ಯ.

ಮುಂಬಯಿ ಇಲಾಖೆಯ, ಚೀಫ್ ಎಜಂಟ ಹುಬ್ಬಳ್ಳಿ

Printed by M. K. Joshi, at the Karnatak Printing Works, Dharwar, and
Published by Venkatesh B. Alur, at DHARWAR

**13. ದಿ ಯುನೈಟೆಡ್ ಇಂಡಿಯ ಲೈಫ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್, ಮದರಾಸು**




The United India Life Assurance Company Ltd, Madras (Estd: 1906) SPECIAL FEATURES
*Compound Bonus
*Trust Fund under Government Trustee
*Directors elected from Policy Holders
*Assets exceed 87 lakhs
*Annual Income 21 lakhs
*Claims paid till now exceed 30 lakhs
*Branches all over India, Burma & Ceylon.

for Agency terms and other particulars, apply to:

The Organiser,
The United India Life Assurance Company Ltd, Madiman Building, Hublic (Dt.Dharwar)


ಈ ಜಾಹಿರಾತಿನಲ್ಲಿ ಕೆಲವು ವಿಸ್ಮಯಕಾರಿ ವಿಷಯಗಳು ಹೊರ ಬೀಳುತ್ತವೆ. ಮೊದಲನೆಯದಾಗಿ ಸಂಚಿತ ಲಾಭಾಂಶ, ಕೂಡಿಕೆಯಾದ ಹಣಕ್ಕೆ ಸರ್ಕಾರಿ ಭದ್ರತೆ, ಪಾಲಿಸಿದಾರರನ್ನೊಳಗೊಂಡ ಪಾರದರ್ಶಿಕ ಆಡಳಿತ, ಸಂಸ್ಥೆಯ ಆಸ್ತಿ, ಆದಾಯ, ದಾವೆಗಳ ಮೊತ್ತಗಳಲ್ಲಿನ ಗಣನೀಯ ಅಭಿವೃದ್ಧಿ.

**14. ದಿ ತರುಣ್ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್.**

‘ದಿ ತರುಣ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್
ಡಾಯಿಮಂಡ ಪಾಲಿಸಿ–ವಿಮೆಯಿಳಿಸುವುದಾದರೆ ಇದರಂತಹ ಸುಂದರ ಯೋಜನೆಯಿಲ್ಲ; ಸ್ವಸಂರಕ್ಷಣೆ, ಪೆನ್ಷನ್ ಮತ್ತು ಸುರಕ್ಷಿತ ಠೇವುಗಳ ಲಾಭತ್ರಯವನ್ನು ಕೊಡುವುದು.
ಇದರ ಹೊರತಾಗಿ ಇನ್ನೂ ಹಲವು ಆಕರ್ಷಕ ಯೋಜನೆಗಳಿವೆ...."





ಇನ್ನೊಂದು ಜಾಹಿರಾತನ್ನು ನೋಡಿ




ಈ ಮೇಲಿನ ಜಾಹಿರಾತಿನಲ್ಲಿ "ಕುಟುಂಬದ ಭವಿಷ್ಯತ್ತಿನ ವ್ಯವಸ್ಥೆ, ಸಂರಕ್ಷಣೆ ಮತ್ತು ಠೇವು ಎಂದರೇನೇ–ಆಯುಷ್ಯದ ವಿಮೆ!
ಜೀವಮಾನದಲ್ಲಿಯೂ ಅದರ ತರುವಾಯವೂ ವಿಮಾದಾರರ ಹಕ್ಕನ್ನು (ಕ್ಲೇಮು) ಮುಟ್ಟಿಸುವುದು ವಿಮಾ ವ್ಯವಸಾಯದಲ್ಲಿಯ ಅತ್ಯಂತ ಮಹತ್ವದ ಸಂಗತಿಯು.
"ನನ್ನ ಪತಿ ಮಹಮದ ಹನೀಫ ಸಾಹೇಬ ಇವರು ‘ದಿ ತರುಣ ಇನ್ಸುರೆನ್ಸ್ ಕಂಪನಿಯಲ್ಲಿ 500 ರೂ. ವಿಮೆ ಇಳಿಸಿದ್ದರು. ದುರ್ದೈವದಿಂದ ತೀರ ಕಡಿಮೆ ಕಂತುಗಳನ್ನು ತುಂಬಿ ಅವರು 1939ರಲ್ಲಿ ತೀರಿಕೊಂಡರು. ಆ ಹಕ್ಕನ್ನು ಮುಟ್ಟಿಸುವುದರಲ್ಲಿ ‘ತರುಣ’ವು ತೋರಿಸಿದ ಸಮಯನಿಷ್ಠತೆ,ದಕ್ಷತೆ ಮತ್ತು ಸಹಾನುಭೂತಿಯು ಪ್ರಶಂಸಾರ್ಹವಾಗಿದ್ದು, ನಾನು ಕಂಪನಿಗೆ ತುಂಬಾ ಕೃತಜ್ಞಳಾಗಿದ್ದೇನೆ. ತರುಣದ ಸುವ್ಯವಸ್ಥಿತ ಮತ್ತು ದಕ್ಷ ಆಡಳಿತದಿಂದ ಅದರ ಉತ್ತರೋತ್ತರ ಅಭಿವೃದ್ದಿಯಾಗಲೆಂದು ಹಾರಯಿಸುತ್ತೇನೆ.
ಶ್ರೀಮತಿ ಬಿಲಾಬಿ ಗೋಲಂದಾಜ್,ಸಾಂಗಲಿ"

ಹೇರಳ ಕಮೀಷನ್ ಇಲ್ಲವೆ ಸಂಬಳದ ಮೇಲೆ ಏಜೆಂಟರನ್ನು ನಿಯಮಿಸುವುದಿದೆ.ಕೆಳಗಿನ ವಿಳಾಸಕ್ಕೆ ಭೆಟ್ಟಿಯಾಗಿರಿ ಇಲ್ಲವೆ ಬರೆಯಿರಿ:–
ಹೆಡ್ ಆಫೀಸು: ಫೋರ್ಟು ಮುಂಬಯಿ
ಬ್ರಾಂಚ್ ಆಫೀಸು: ಮೇನ್ ರೋಡ್ ಸಾಂಗಲಿ

ಚೀಫ್ ಏಜೆಂಟರು: ದೇಶಪಾಂಡೆ ಅಂಡ್ ಸನ್ಸ್
ಧಾರವಾಡದ ಸ್ಪೆಷಲ್ ಏಜೆಂಟರು: ಆರ್.ಎಸ್.ಬೈತಮಂಗಲ್ಕರ್ ಅಂಡ್ ಕೋ.”
ಈ ಜಾಹಿರಾತಿನಲ್ಲಿ ದಾವೆ/ಕ್ಲೇಮ್‌ನ್ನು ಯಶಸ್ವಿಯಾಗಿ ನಿರ್ವಹಿಸುವುದರ ಅವಶ್ಯಕತೆಯನ್ನು ಬಿಂಬಿಸಲಾಗಿದೆ.


ದಿ ತರುಣ ಅಶ್ಯುರನ್ಸ್ ಕಂಪನಿ ಲಿ., ಅಹಮ್ಮದಾಬಾದ

ಎ. ಡಿ. ದೇಶಪಾಂಡೆ, ಮೇನ್ ರೋಡ್, ಸಾಂಗಲಿ

“ದಿ ತರುಣ್ ಅಶ್ಯುರೆನ್ಸ ಕಂಪನಿ,ಲಿಮಿಟೆಡ್ ಅಹಮ್ಮದಾಬಾದ್..
ನಮ್ಮಲ್ಲಿ ಕುಟುಂಬ ಸಂರಕ್ಷಕ ಯೋಜನೆ, ಮಲ್ಟಿಪಲ್ ಬೆನಿಫಿಟ್ ಪ್ಲಾನ್, ಫಿಕ್ಸ್ಡ್ ಬೋನಸ್ ಎಂಡೋಮೆಂಟ್, ಮಕ್ಕಳ ಸುಖ ಭವಿಷ್ಯದ ವಿಮೆ– ಮೊದಲಾದ ಹಲವು ಲಾಭದಾಯಕ ಯೋಜನೆಗಳಿವೆ.
ತರುಣ ಡಾಯಮಂಡ್ ಪಾಲಿಸಿಯಿಂದ ಸ್ವಸಂರಕ್ಷಣೆ, ಪೆನ್ಶನ್ ಮತ್ತು ಸುರಕ್ಷಿತ ಠೇವುಗಳು ಸಿಗುವವು.
ತರುಣ ಬಾಂಡ್: ಇದೊಂದು ಅದ್ಭುತ ಕಾಣಿಕೆ. ಬರಿ ರೂ.1380 ರಲ್ಲಿ ನಿಮ್ಮ ಮತ್ತು ನಿಮ್ಮ ಕುಟುಂಬದ ರಕ್ಷಣೆಯಾಗುವುದಲ್ಲದೆ, ದೈವವಿದ್ದರೆ 2500 ರೂ ಸಿಗುವ ಸಂಭವವಿದೆ.
1937ರ ಅಗಸ್ಟ್ ತಿಂಗಳಿನಲ್ಲಿ ತರುಣ ಬಾಂಡ್‌ಗಳ ಬಹುಮಾನಗಳನ್ನು ಹಂಚುವ ಸಮಾರಂಭವು ಒದಗಲಿದೆ!
ಕರ್ನಾಟಕದಲ್ಲೆಲ್ಲಾ ಕೆಲಸಮಾಡಲು ಏಜೆಂಟರು ಬೇಕು. ಕೆಳಗಿನ ವಿಳಾಸಗಳಿಗೆ ಬರೆಯಿರಿ:....”

ಈ ಲೇಖನದಲ್ಲಿ ಉದ್ಧರಿಸಿದ ಜಾಹಿರಾತುಗಳನ್ನು ಒಟ್ಟಾರೆಯಾಗಿ ಗಮನಿಸಿದಾಗ ಕಂಡುಬರುವ ಕೆಲವು ಅಂಶಗಳನ್ನು ಈ ವಿಧದಲ್ಲಿ ನೋಡಬಹುದಾಗಿದೆ.

1.ಅಂದಿನ ಮೈಸೂರು ಪ್ರಾಂತ್ಯವು ಇಂದಿನ ಏಕೀಕೃತ ಕರ್ನಾಟಕದ 2/3 ರಷ್ಟು ಪ್ರದೇಶವನ್ನು ಹೊಂದಿರಲೇ ಇಲ್ಲವೆಂಬುದು ಸತ್ಯವಾದರೂ 1890 ರ ಸುಮಾರಿಗೆ ಆರಂಭಗೊಂಡ ಕರ್ನಾಟಕ ವಿದ್ಯಾವರ್ಧಕ ಸಂಘದ ಸ್ಥಾಪನೆಯ ನಂತರ ಕರ್ನಾಟಕದ ಏಕೀಕರಣದ ಬಗೆಗಿನ ಜನ ಜಾಗ್ರತಿಯನ್ನು ಈ ಜಾಹೀರಾತುಗಳಲ್ಲಿ ಕಾಣಬಹುದಾಗಿದೆ.

2.ಅಂತೆಯೆ 1889, ಅಗಸ್ಟ್ 23 ರಂದು ಅಂದಿನ ದಿವಾನ್ ಕುಮಾರಪುರಂ ಶೇಷಾದ್ರಿ ಅಯ್ಯರ್‌ರವರ ದೂರದೃಷ್ಟಿಯ ಫಲವಾಗಿ ರೂಪುಗೊಂಡ ವಿಮಾ ಯೋಜನೆಯು 1891 ರ ಜುಲೈ 20 ಕ್ಕೆ ಮೈಸೂರು ಸರ್ಕಾರಿ ವಿಮಾ ಇಲಾಖೆ(ಎಂ.ಜಿ.ಐ.ಡಿ)ಯಾಗಿ ಆರಂಭ ಗೊಂಡದ್ದು ಇತಿಹಾಸದ ಪುಟಗಳಲ್ಲಿದೆ. ಇದು 1900 ರ ಹೊತ್ತಿಗೆ ಬೆಳೆದುನಿಂತಿದುದು ಸಹಜವೇ ಸರಿ.

3.ವಿಮೆಯ ಅವಶ್ಯಕತೆಯನ್ನು ಸಾರಿಹೇಳುವ ಪ್ರತಿ ಜಾಹಿರಾತು ಸಮಾಜದಲ್ಲಿ ಮೇಲ್ವರ್ಗದ ಮನೋಧರ್ಮವನ್ನು ತಿಳಿಸುವುದು.

4.ವಿಮಾ ಮಾರಾಟದ ಉದ್ಯಮವು ಈ ಪ್ರಾಂತ್ಯದಲ್ಲಿ ಬಲವಾಗಿದ್ದುದನ್ನು ಇಲ್ಲಿ ಕಾಣಬಹುದಾಗಿದೆ. ನಿರುದ್ಯೋಗದ ಬಗೆಗೆ ಮಾತನಾಡುವುದರ ಮೂಲಕ ಉದ್ಯೋಗಾವಕಾಶಗಳ ಅರಿವನ್ನೂ ಮೂಡಿಸುತ್ತದೆ.

5. ಇಂದಿನ ಅಭಿವೃದ್ಧಿಗೊಂಡಿರುವ ಸನ್ನಿವೇಶದಲ್ಲಿ ಅಲಭ್ಯವಾಗಿರುವ ಕೆಲವು ವಿಮಾ ಯೋಜನೆಗಳ ವಿವರಗಳು ಇಲ್ಲಿವೆ.

6.ವಿಮಾ ಉದ್ಯಮದಲ್ಲಿ ಮುಖ್ಯವಾಗಿರುವ ಸರ್ವಿಸ್(ಸೇವೆ), ಕ್ಲೇಮುಗಳ ಸಕಾಲಿಕ ವಿಲೇವಾರಿ, ವಿಮಾಧನದ ರಕ್ಷಣೆ, ಲಾಭದಾಯಕ ಹೂಡಿಕೆ, ಲಾಭಾಂಶ ವಿತರಣೆಗಳ ಬಗೆಗೂ ವಿವರಗಳನ್ನು ನೀಡುವುದು.

7. ಇಂದು ನಾವುಗಳು ಊಹಿಸಿಕೊಳ್ಳಲೂ ಸಾಧ್ಯವಾಗದ ರೀತಿಯಲ್ಲಿ, ಈ ಪ್ರಾಂತ್ಯದಲ್ಲಿ ವಿಜೃಂಭಿಸಿದ ಕೆಲವು ಕಂಪನಿಗಳ ಬಗೆಗೆ ತಿಳಿದುಕೊಳ್ಳಬಹುದಾಗಿದೆ.

ಒಟ್ಟಾರೆಯಾಗಿ ಅಂದಿನ ಮೈಸೂರು ಪ್ರಾಂತ್ಯದಲ್ಲಿಯೂ ಅತ್ಯಗತ್ಯವಾದ ವಿಮಾ ವಹಿವಾಟು ಎಷ್ಟು ಸಮರ್ಪಕವಾಗಿ ನಡೆದಿತ್ತೆಂಬುದು ಮನವರಿಕೆಯಾಗುತ್ತದೆ. ಲೇಖನದಲ್ಲಿ ಬಳಸಿರುವ ಚಿತ್ರಗಳಿಗಾಗಿ ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನಕ್ಕೆ ಸದಾಋಣಿಯಾಗಿದ್ದೇನೆ.

[ಲೇಖಕರು ವಿಮಕ್ಷೇತ್ರದಲ್ಲಿ ವಿಶೇಷ ಪರಿಶ್ರಮಹೊಂದಿದ್ದು ವಿಮ ವಿದ್ಯೆಯ ಪ್ರಚಾರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ]

**********